# 6

# “ದೇವರೇ ನಮಗೆ ನಾಯಕರನ್ನು ದಯಪಾಲಿಸು!”

## (2 ಸಮುವೇಲ 2-6; 23; 1 ಪೂರ್ವಕಾಲವೃತ್ತಾಂತ 11-14)

ಈ ದಿವಸದ ಕೂಗು “ನಾಯಕರನ್ನು ದಯಪಾಲಿಸು!” ಇದು ಒಂದು ವೇಳೆ ಸರ್ಕಾರದಲ್ಲಿರಬಹುದು, ಕುಟುಂಬದಲ್ಲಿರಬಹುದು ಅಥವಾ ಸಭೆಯಲ್ಲಿರಬಹುದು. ನಾಯಕರ ಅವಶ್ಯದ ಕೂಗು ಎಲ್ಲಾ ಕಡೆಯಲ್ಲಿರುತ್ತದೆ. ದೇಶದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಎದುರಿಸಲು “ನಿಜವಾದ ನಾಯಕರೆಲ್ಲಿ? ಯಥಾರ್ಥರೆಲ್ಲಿ?” ಎಂದು ಪ್ರಶ್ನಿಸುತ್ತೇವೆ. ಮನೆಗಳಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಎದುರಿಸುವವರೆಲ್ಲಿ? “ಮನುಷ್ಯರು ಕುಟುಂಬದಲ್ಲಿ ನಾಯಕತ್ವವನ್ನು ಹೊತ್ತು ಕೊಳ್ಳುವದಿಲ್ಲ. ಮುಖ್ಯವಾಗಿ ಆತ್ಮೀಕ ವಿಷಯಗಳಲ್ಲಿ ನಾಯಕತ್ವವಿಲ್ಲ.” ಸಭೆಯಲ್ಲಿ ಸಮಸ್ಯೆಗಳು ಬರುವಾಗ “ಒಂದು ವೇಳೆ ಜವಾಬ್ದಾರಿಯುತವಾದ ನಾಯಕರು ಇದ್ದಿದ್ದರೆ ಈ ಸಮಸ್ಯೆಗಳಿಗೆ ಪರಿಹಾರವಾಗುತ್ತಿತ್ತು.”

ಇದು ನಮ್ಮ ದೇಶದ ಸಮಸ್ಯೆ ಮಾತ್ರವಲ್ಲ; ನಮ್ಮ ಸುತ್ತಲಿನ ಪ್ರಪಂಚದ ಸಮಸ್ಯೆಯಾಗಿದೆ. ಹೆಚ್ಚಾಗಿ ಪ್ರಯಾಣ ಮಾಡುವ ಜನರನ್ನು ನಾವು ಸಂಧಿಸಿ ಅವರೊಂದಿಗೆ ಮಾತನಾಡುವಾಗ, “ಅವಶ್ಯವಿರುವಂಥ ಸಂಗತಿ ಒಳ್ಳೆಯ ನಾಯಕತ್ವದ್ದಾಗಿರುತ್ತದೆ,” “ದೇವರೆ ನಮಗೆ ನಾಯಕರನ್ನು ಕೊಡು” ಎನ್ನುವದು ಭೌಗೋಳಿಕ ವಾದ ಕೂಗಾಗಿರುತ್ತದೆ.

ಈ ಯುಗದ ನಾಯಕತ್ವವು ಹೊಸದು ಮತ್ತು ನಿರ್ದಿಷ್ಟವಾದದ್ದು ಆಗಿರುವದಿಲ್ಲ. ದೇವರಿಂದ ನೇಮಿಸಲ್ಪಟ್ಟ ನಾಯಕರುಗಳ ಕೊರತೆ ಎಲ್ಲಾ ವರ್ಷಗಳಲ್ಲೂ ಇರುತ್ತದೆ. ಅರಸನಾದ ಸೌಲನು ಮರಣ ಹೊಂದಿದಾಗ ನಿಜವಾಗಿಯು ಈ ಕೊರತೆ ಉದ್ಭವಿಸಿತು. ಆದರೆ ದಾವೀದನು ಕಿರೀಟಹೊಂದಿದ ಅರಸನಾದನು. ಹಿಂದಿನ ಪಾಠದಲ್ಲಿ ಸೌಲನು ಫಿಲಿಷ್ಟಿಯರ ಜೊತೆ ಯುದ್ಧದಲ್ಲಿ ಮರಣ ಹೊಂದಿದಾಗ, ದಾವೀದನಿಗೆ ಸಿಂಹಾಸನಕ್ಕೆ ಹೋಗುವ ದಾರಿ ತೆರೆದು ಕೊಂಡಿತು. ಆದರೆ ಅಲ್ಲಿ ಅಪಜಯದ ಪರಿಣಾಮವನ್ನು ಇಸ್ರಾಯೇಲ್ ಜನಾಂಗದಲ್ಲಿ ಕಾಣಲಿಲ್ಲ.

ಫಿಲಿಷ್ಟಿಯರಿಂದ ಅಪಜಯ ಹೊಂದುವದಕ್ಕಿಂತ ಮೊದಲೇ ಇಸ್ರೇಲ್ ಸಮಸ್ಯೆಯಿಂದ ತುಂಬಿದ ರಾಷ್ಟ್ರವಾಗಿತ್ತು. ಅರಸನಾದ ಸೌಲನ ನಾಲ್ವತ್ತು ವರ್ಷದ ಬೇಜವಾಬ್ದಾರಿಯ ಆಡಳಿತ ರಾಜಕೀಯವಾಗಿ ಆರ್ಥಿಕವಾಗಿ ಮತ್ತು ಆತ್ಮೀಕವಾಗಿ ಕೀಳು ಮಟ್ಟಕ್ಕೆ ಕುಸಿದಿತ್ತು. ಆತನು ತನ್ನ ಕುಟುಂಬಕ್ಕೆ ಹೆಚ್ಚಾದ ಮಹತ್ವ ನೀಡಿದ್ದರಿಂದ ಆತನ ಸ್ವಂತ ನೆಲ ವಿಭಾಗವಾಯಿತು. ಮಾನಸಿಕವಾಗಿ ದಾವೀದನನ್ನು ಹಿಮ್ಮೆಟ್ಟಿದ್ದರಿಂದ, ಸೌಲನು ದೇಶದ ವಿಷಯದಲ್ಲಿ ನಿರಾಶಕ್ತಿ ಹೊಂದಿದ್ದನು. ಸೌಲನು ಯಾಜಕರನ್ನು ಕೊಂದಿದ್ದನು. ರಕ್ಷಣೆಗಾಗಿ ಅವರನ್ನು ದಾವೀದನ ಬಳಿಗೆ ಒತ್ತಾಯ ಪೂರ್ವಕವಾಗಿ ಕಳುಹಿಸಿದ್ದನು. ಇಷ್ಟೇ ಅಲ್ಲದೆ, ಇಸ್ರಾಯೇಲಿನ ಸೈನ್ಯದವರು ಫಿಲಿಷ್ಟಿಯರಿಂದ ಪರಿಪೂರ್ಣವಾಗಿ ಅಪಜಯ ಹೊಂದಿದರು. ಸೌಲನು, ಅವನ ಮಕ್ಕಳು ಮರಣಹೊಂದಿದರು. ಮೊದಲ ಸಮುವೇಲ 31:7 ಅಪಜಯದ ಪರಿಣಾಮದ ಕುರಿತಾಗಿ ಮಾತನಾಡುತ್ತದೆ:

> ಇಸ್ರಾಯೇಲ್ ಭಟರು ಸೋತರು, ಸೌಲನೂ ಅವನ ಮಕ್ಕಳೂ ಸತ್ತರು ಎಂಬ ವರ್ತಮಾನವನ್ನು ತಗ್ಗಿನ ಆಚೆಯಲ್ಲಿಯೂ ಯೊರ್ದನಿನ ಆಚೆಯಲ್ಲಿಯೂ ವಾಸವಾಗಿದ್ದ ಇಸ್ರಾಯೇಲ್ಯರು ಕೇಳಿ ತಮ್ಮ ಪಟ್ಟಣಗಳನ್ನು ಬಿಟ್ಟು ಓಡಿಹೋದರು; ಫಿಲಿಷ್ಟಿಯರು ಬಂದು ಅವುಗಳಲ್ಲಿ ವಾಸಿಸಿದರು.

ಯಾವುದೇ ಹೊರದೇಶದವರು ಅಮೇರಿಕರನ್ನ್ರಾದ ನಮ್ಮ ಮೇಲೆ ಅಧಿಕಾರ ನಡೆಸದೇ ಇದ್ದುದರಿಂದ ಈ ವಿಷಯವನ್ನು ನಾವು ಅರ್ಥಮಾಡಿಕೊಳ್ಳಲು ಕಷ್ಟವಾಗುತ್ತದೆ. ಹೊರ ದೇಶದವರು ನಮ್ಮನ್ನು ಅಕ್ರಮಿಸಿದರೆ, ನಮ್ಮ ಪರಿಸ್ಥಿತಿ ಹೇಗಿರಬಹುದು ಎಂದು ಊಹಿಸಿ. ನಮ್ಮ ಸೈನ್ಯವನ್ನು ನಾಶಮಾಡಿ, ನಮ್ಮ ಅದ್ಯಕ್ಷರನ್ನು ಹಾಗೂ ರಾಜಕೀಯ ನಾಯಕರನ್ನು ಕೊಂದರೆ ನಮ್ಮ ಪರಿಸ್ಥಿತಿ ಹೇಗಿರಬಹುದು? ಇಸ್ರಾಯೇಲ್ಯರ ಸೈನ್ಯವನ್ನು ನಾಶಮಾಡಿ, ಸೌಲನನ್ನು ಕೊಂದಾಗ, ಇದೇ ಪರಿಸ್ಥಿತಿ ಉಂಟಾಯಿತು. ಇಸ್ರಾಯೇಲ್ಯರ ಹೀನಸ್ಥಿತಿಗೆ ಇಳಿದ ಬಗ್ಗೆ W. ಫಿಲಿಷ್ ಕೆಲ್ಲರ್ ಹೀಗೆ ಬರೆದಿದ್ದಾರೆ:

> ವೈರಿಗಳಾದ ಫಿಲಿಷ್ಟಿಯರ ಕಬ್ಬಿಣದ ಪಾದದ ಕೆಳಗೆ ಇಸ್ರಾಯೇಲ್ಯರು ಅಡ್ಡಬಿದ್ದರು. ಕರುಣೆಯಿಲ್ಲದ ಅಧಿಕಾರಿಗಳು ಸುಂದರವಾದ ಪಟ್ಟಣವನ್ನು ಸೂರೆ ಮಾಡಿದರು. ಈ ಹಿಂದೆ ಸೌಲನಿಂದ ಆಡಳಿತ ನಡೆಸಲ್ಪಟ್ಟಿದ್ದ ಸ್ಥಳಗಳ ಮೇಲೆ ಅವರು ಆಡಳಿತ ನಡೆಸಿ ಹತೋಟಿಗೆ ತಂದರು. ಯುದ್ಧದಿಂದಲೂ ಅವರ ಹಿಂಸೆಯಿಂದಲೂ ಇಸ್ರಾಯೇಲ್ಯರು ನಲುಗಿದರು.[1]

ನಾಯಕನಿಗಾಗಿ ಇಸ್ರಾಯೇಲ್ ಜನಾಂಗವು ಮೊರೆ ಇಟ್ಟಾಗ, ದಾವೀದನು ಅವರಿಗೆ ನಾಯಕನಾಗಿ ಬಂದನು.

ಇದು ಅರಸನಾದ ದಾವೀದನು ಎದುರಿಸಬೇಕಾದ ಮೊದಲನೆಯ ಸಮಸ್ಯೆ. 2 ಸಮುವೇಲ 2-6; 23, ಇದಕ್ಕೆ ಸಹಾಯಕವಾಗಿ 1 ಪೂರ್ವಕಾಲವೃತ್ತಾಂತ 11-14. ಇದರಲ್ಲಿ ಇಷಯನ ಮಗನಾದ ದಾವೀದನು, ದೇವರ ಸಹಾಯದಿಂದ ಸಮಸ್ಯೆಗಳನ್ನು ಹೇಗೆ ಎದುರಿಸಿದನು ಎಂದು ನೋಡುತ್ತೇವೆ. ಬಹುಶ ಅತಿ ಅವಶ್ಯಕವಾಗಿ ಈ ದಿನಕ್ಕೆ ಬೇಕಾಗಿರುವ ನಾಯಕತ್ವದ ಬಗ್ಗೆ ಕಲಿಯಲಿದ್ದೇವೆ.

## ವಿವೇಕಿಗಳಾದ ನಾಯಕರುಗಳು, ಸದ್ಗುಣಗಳನ್ನು ಹೊಂದಿದ ಮನುಷ್ಯರು (2 ಸಮುವೇಲ 2:1-7)

ಇಸ್ರಾಯೇಲ್ಯರಿಗೆ ನಾಯಕತ್ವದ ಅವಶ್ಯವಿತ್ತು, ಅವರಿಗೆ ಯಾವ ತರಹದ ನಾಯಕತ್ವವಾದರು ಅವಶ್ಯವಿದಿಲ್ಲ. ಅದು ಬಲಹೀನವಾದ ನಾಯಕತ್ವವಲ್ಲ, ಬಲವುಳ್ಳ ಜ್ಞಾನಿಯಾದ, ದೇವರ ಮನುಷ್ಯನ ನಾಯಕನಾಗಿದ್ದ ಅವಶ್ಯವಿತ್ತು. ಹರಿದು ಹೋಗಿ ರಕ್ತಸಿಕ್ತವಾಗಿದ್ದ ಜನಾಂಗವನ್ನು ಆದರಿಸುವ ನಾಯಕನ ಅವಶ್ಯವಿತ್ತು. ಆದುದರಿಂದ ದೇವರು ಮುವತ್ತು ವರ್ಷಗಳ ಕಾಲ ಕುರುಬರ ಹೊಲದಲ್ಲಿ ಒಂಟಿಯಾಗಿಯೂ, ಅರಮನೆಯ ಐಶ್ವರ್ಯದಲ್ಲಿಯೂ, ಮರುಭೂಮಿಯಲ್ಲಿ ವೈರಿ ಯಾಗಿಯೂ ತರಬೇತಿ ಪಡೆದ ದಾವೀದನನ್ನು ಸಿದ್ಧಮಾಡಿದನು.

ನಾಯಕತ್ವಕ್ಕಾಗಿ ದೇವರ ಮೊದಲ ಆದ್ಯತೆ ಆ ಮನುಷ್ಯನು ಯಥಾರ್ಥನಾಗಿರ ಬೇಕು. ನಾಯಕತ್ವವು ನಾಯಕನು ಮಾಡುವಂಥದ್ದರಿಂದ ಪ್ರಾರಂಭವಾಗುವದಿಲ್ಲ. ನಾಯಕತ್ವದ ನಾಯಕರು ಏನಾಗಿದ್ದಾರೆ ಅಲ್ಲಿಂದ ಪ್ರಾರಂಭವಾಗುತ್ತದೆ. 2 ಸಮುವೇಲ ಮೊದಲಿನ ಪುಟಗಳಲ್ಲಿ ದಾವೀದನ ಸದ್ಗುಣದ ಬಗ್ಗೆ ನೋಡಿದೆವು. ಸೌಲನ ಮರಣದ ನಿಮಿತ್ತ ಗೋಳಾಡಿ ಅದರ ಬಗ್ಗೆ ಕೀರ್ತನೆಯನ್ನು ಬರೆದನು (2 ಸಮುವೇಲ1:1-27); ಸೌಲನಿಗೆ ಮುಯ್ಯಿ ತೀರಿಸದೆ ಇದ್ದಂತ ದೊಡ್ಡ ಮನಸ್ಸು ಅವನಲ್ಲಿತ್ತು ಯೂದಾಯ ಪಟ್ಟಣಕ್ಕೆ ಹಿಂದಿರುಗುವ ವಿಷಯದಲ್ಲಿ ವಿಶಾಲ ಮನಸ್ಸಿನಿಂದ ದೇವರ ನಡೆಸುವಿಕೆಗಾಗಿ ಬೇಡಿಕೊಂಡನು (2:1-3); ದೇವರ ಕಡೆಗೆ ಮಾರ್ಗದರ್ಶನಕ್ಕಾಗಿ ನೋಡುವ ವಿಶಾಲ ಹೃದಯವುಳ್ಳವನು.

2:1ರಲ್ಲಿ ದೇವರು ದಾವೀದನಿಗೆ ಹೆಬ್ರೋನಿಗೆ ಹೋಗಲು ಹೇಳಿದನು. ಯೂದಾಯದಲ್ಲಿ ಹೆಬ್ರೋನ ಬಹಳ ವಿಶೇಷವಾದ ಪಟ್ಟಣವಾಗಿತ್ತು. ಅಲ್ಲಿ ಅಬ್ರಹಾಮನು ತನ್ನ ಹೆಂಡತಿಯಾದ ಸಾರಳನ್ನು ಹೂಣಲು ಹೊಲವನ್ನು ಕೊಂಡುಕೊಂಡಿದ್ದನು. ಯೆಹೋಶುವನ ಸೈನ್ಯವು

ಹೆಬ್ರೋನಿನ ಮೇಲೆ ಜಯ ಸಾಧಿಸಿದಾಗ ಕಾಲೇಬನು ಅದನ್ನು ತನ್ನ ಸ್ವಾಸ್ತವನ್ನಾಗಿ ಮಾಡಿಕೊಂಡನು.

ಮೂವತ್ತು ವರ್ಷದವನಾದ ದಾವೀದನನ್ನ ಹೆಬ್ರೋನಿನಲ್ಲಿ ಮೊದಲನೆಯ ಸಾರಿ ಅರಸನನ್ನಾಗಿ ಸ್ವೀಕರಿಸಿದರು. "ನಂತರ ಯಾದಾಯದ ಜನರು ಬಂದು ಅವನನ್ನು ಯೆಹೋದದ ಅರಸನನ್ನಾಗಿ[2] ಅಭಿಷೇಕ ಮಾಡಿದರು" (2:4ಎ). ಗಮನಿಸಿ ಯೂದಾ ಕುಲದವರು ಮಾತ್ರ ಅವನನ್ನು ಅರಸನನ್ನಾಗಿ ಒಪ್ಪಿಕೊಂಡರು ಮುಂದಿನ ಏಳುವರೆ ವರ್ಷಗಳು ಯೂದಾ ಕುಲವನ್ನು ದಾವೀದನು ಆಳಿದನು.

ದಾವೀದನು ಕಿರೀಟದಾರಣೆ ಮಾಡಿದ ತಕ್ಷಣ ಅವನ ಗುಣಕ್ಕೆ ಒಂದು ಪ್ರಮುಖ ಕಾರ್ಯವಿತ್ತು. "ಯಾಬೇಷ್‌ಗಿಲ್ಯಾದಿನವರು ಸೌಲನನ್ನು ಸಮಾಧಿ ಮಾಡಿದರು" ಎಂದು ಯೂದಾಯದವರು ಅರಸನಿಗೆ ತಿಳಿಸಿದರು (2:4ಬಿ).

ಸೌಲನ ಮತ್ತು ಅವನ ಮಕ್ಕಳ ಶವವನ್ನು ಹುಡುಕಿದ ತಕ್ಷಣ ಫಿಲಿಷ್ಟಿಯರು ಅವರ ತಲೆ, ಕಿವಿಗಳನ್ನು ಕತ್ತರಿಸಿ ಬೆತ್‌ಷೆಯಾನಿನ ಗೋಡೆಗೆ ತೂಗುಹಾಕಿದರು. ಬೆತ್‌ಷೆಯಾನವು ಪಾಲೇಸ್ತಿನನ ಉತ್ತರ ಮದ್ಯದಲ್ಲಿ ಇತ್ತು. ಇಸ್ರಾಯೇಲ್ಯರು ವಾಸಿಸುತ್ತಿದ್ದ ಮದ್ಯಭಾಗದಲ್ಲಿ ಫಿಲಿಷ್ಟಿಯರು ಅವರ ಜಯವನ್ನು ಕೊಂಡಾಡುತ್ತಿರುವ ಈ ವಿಷಯವು ಯಾಬೇಷ್ ಗಿಲ್ಯಾದಿಗೆ ಮುಟ್ಟಲು, ಈ ಪಟ್ಟಣವು ಅನ್ಯರ ಪಟ್ಟಣವಾಗಿತ್ತು. ಮತ್ತು ಬೆನ್ಯಾಮೀನ್ಯನ ಕುಲಕ್ಕು, ಸೌಲನಿಗೆ ಬಲವಾದ ಸಂಬಂಧ ಹೊಂದಿತ್ತು.[3] ಯಾಬೇಷ್‌ಗಿಲ್‌ಯಾದಿನವರು ಕಷ್ಟಪಟ್ಟು ಕತ್ತಲಿನಲ್ಲಿ ಬೆತ್‌ಷೆನಿಗೆ ಬಂದು ಅವರ ದೇಹಗಳನ್ನು ಇಳಿಸಿ, ಯಾಬೇಷ್ ಗಿಲ್ಯಾದಿಗೆ ಗೌರವ ಪೂರ್ಣವಾಗಿ ಸಮಾಧಿ ಮಾಡಲು ಹೊಯ್ದರು.[4]

ಈ ಒಂದು ಸುದ್ದಿಯ ಬಗ್ಗೆ ದಾವೀದನ ಪ್ರತಿಕ್ರಿಯೆ ಏನಾಗಿತ್ತು? ಅಲಕ್ಷ್ಯ ಮಾಡಿ ಅಥವಾ ಪ್ರತಿಕ್ರಿಯಿಸಬೇಕೋ? ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬೇಕಾಗಿತ್ತು? ಯಾಬೇಷ್ ಗಿಲ್ಯಾದಿನವರು ಸೌಲನ ಬಳಿ ಬಲವಾಗಿ ಕೈ ಜೋಡಿಸಿದವರು. ದಾವೀದನು ಸ್ನೇಹದ ಹಸ್ತವನ್ನು ನೀಡುವದರ ಮೂಲಕ ತನ್ನ ಪ್ರತಿಕ್ರಿಯೆಯನ್ನು ತೋರಿಸಬೇಕಿತ್ತು. ದಾವೀದನಿಗೆ ತಿಳಿದಿತು. ಇಸ್ರೇಲಿಗೆ ಸ್ವಸ್ಥತೆ ಉಂಟಾಗಬೇಕಿದ್ದರೆ, ಹಳೆಯದನ್ನು ಸಮಾಧಿ ಮಾಡಬೇಕಿತ್ತು. ದೇವರಿಂದ ಅಭಿಷೇಕವನ್ನು ಹೊಂದಿದವನಾಗಿ, ನಾಯಕತ್ವವನ್ನು ತೆಗೆದುಕೊಂಡು, ಅಧಿಕೃತವಾಗಿ ಯಾಬೇಷ್ ಗಿಲ್ಯಾದಿನವರು ಧೈರ್ಯವಾಗಿ ಮಾಡಿದ ಕಾರ್ಯಕ್ಕೆ ಸಂತೋಷದ ಸಂದೇಶವನ್ನು ಕಳುಹಿಸಿದನು.

ದಾವೀದನ ಆಡಳಿತದ ಕುರಿತಾಗಿ ಹೆಚ್ಚು ಕಲಿಯುವಾಗ ಅವನ ಅಪರಿಮಿತವಾದ ಮನಸ್ಸಿನ ಉದಾಹರಣೆಯನ್ನು ಗಮನಿಸುತ್ತೇನೆ. ಅದರ ಜೊತೆಯಲ್ಲಿ ಯುದ್ಧ ಪೂರ್ವ ವಾಗ್ದಾನವನ್ನು ನೆರವೇರಿಸುವಂತ "ಯಥಾರ್ಥವಾದ ನಾಯಕತ್ವದ ಅವಶ್ಯ ನಮಗಿದೆ!"[5]

## ವಿವೇಕಿಗಳಾದ ನಾಯಕರುಗಳು ಐಕ್ಯತೆಯ ಕುರಿತು ಆಲೋಚಿಸುತ್ತಾರೆ (2 ಸಮುವೇಲ 2:8-3:1, 6-13, 17-21)

ಒಬ್ಬ ನಾಯಕನು ಅವನಿಂದ ಬಯಸಲ್ಪಡುವ ನಾಯಕತ್ವದ ಬಗ್ಗೆ ಸ್ಪಷ್ಟವಾದ ದರ್ಶನವನ್ನು ಹೊಂದಿದವನಾಗಿರಬೇಕು. ಆದ್ಯಕ್ಷತೆಯ ಮೇರೆಗೆ ತನ್ನ ಗುರಿಯನ್ನು ಸಾಧಿಸಬೇಕು. ಗುರಿಯನ್ನು ಸಾಧಿಸುವವರೆಗೆ ತಾನು ಕೈಗೆತ್ತಿಕೊಂಡಿರುವ ಕೆಲಸದ ಮೇಲೆ ನಿಗವಹಿಸಬೇಕು.

ದಾವೀದನು ಯಾಬೇಷ್ ಗಿಲ್ಯಾದಿನವರನ್ನು ಆಶೀರ್ವಾದಿಸುವ ಮೂಲಕವಾಗಿ ಗಾಯಗೊಂಡು ಸೋತಿದ್ದ ಜನರನ್ನು ಐಕ್ಯಕ್ಕೆ ನಡಿಸುವದರಲ್ಲಿ ತನ್ನ ಮೊದಲ ಆಧ್ಯತೆಯನ್ನು ತೋರಿಸಿದನು. ಅವರು ಐಕ್ಯವಾಗಿರದ ಹೊರತು ಅವರ ದುಷ್ಟ ವೈರಿಗಳಾದ ಫಿಲಿಷ್ಟಿಯರನ್ನು ಎದುರಿಸಲು ಸಾಧ್ಯವಿರಲಿಲ್ಲ. ಅವರಲ್ಲಿ ಐಕ್ಯತೆ ಇಲ್ಲದಂಥ ಪರಿಸ್ಥಿತಿಯು ದೇವರ ಮತ್ತು

ಅವರ ಮಧ್ಯದಲ್ಲಿ ಅಡ್ಡಗೋಡೆಯಾಗಿತ್ತು.[6] ಅವರು ಐಕ್ಯಕ್ಕೆ ಬರುವವರೆಗು ಬೆಳೆದು, ಸಮೃದ್ಧಿಯಾಗುವದಕ್ಕೆ ಸಾಧ್ಯವಿರಲಿಲ್ಲ. ದಾವೀದನ ಅಮೂಲ್ಯವಾದ ಕೀರ್ತನೆ ಈ ರೀತಿಯಲ್ಲಿ ಪ್ರಾರಂಭವಾಗುತ್ತದೆ. "ಆಹಾ ಸಹೋದರರು ಒಂದಾಗಿರುವದು ಎಷ್ಟೋ ಒಳ್ಳೇದು ಎಷ್ಟೋ ರಮ್ಯವಾದದ್ದು!" (ಕೀರ್ತನೆ 133:1). ದೇವರು ನೇಮಿಸಿದ ಎಲ್ಲಾ ನಾಯಕರಲ್ಲಿ ಸಾಮಾನ್ಯವಾಗಿ ತೋರಿಬಂದ ಐಕ್ಯತೆಯೇ ದಾವೀದನ ಗುರಿಯ ಉದ್ದೇಶವಾಗಿತ್ತು.[7]

ಇದರ ಅರ್ಥ ಐಕ್ಯತೆಯ ಮಾರ್ಗ ಸಂಗಮವಾಗಿತ್ತು ಎಂದು ಹೇಳಲಾಗದು, ಆ ಮಾರ್ಗದಲ್ಲಿ ನೆರಳಿತ್ತು ಮತ್ತು ಅದು ತಗ್ಗಿನಲ್ಲಿತ್ತು. ಎಲ್ಲರೂ ಐಕ್ಯತೆಯಲ್ಲಿರುವದನ್ನು ಇಚ್ಛಿಸುವದಿಲ್ಲ. ಕೆಲವರು ಬಯಸುತ್ತಾರೆ. ನನ್ನ ಯೌವನದಲ್ಲಿ ಎಲ್ಲಾರು ಇದನ್ನು ಬಯಸುತ್ತಾರೆ ಎಂದು ತಿಳಿದಿದ್ದೆ. ಆದರೆ ನಾನು ಗಮನಿಸಿದ್ದು ಅನೇಕರು ವಿಭಾಗ ಮಾಡಲು ನೋಡುತ್ತಾರೆ. ಇನ್ನೂ ಕೆಲವರು ಉದ್ದೇಶ ಪೂರ್ವಕವಾಗಿ ವಿಭಾಗಿಸುವ ಕೆಲಸದಲ್ಲಿ ತಲ್ಲೀನರಾಗಿರುತ್ತಾರೆ.

ಅವನು ಪ್ರಥಮವಾಗಿ ಗಮನಿಸಿದ್ದೇನೆಂದರೆ ಸೌಲನ ಮುಖ್ಯ ಸೈನ್ಯಾಧಿಕಾರಿಯಾದಂಥ ಇಸ್ರಾಯೇಲ್ಯನು ಐಕ್ಯತೆಯ ಕಾರ್ಯಕ್ಕೆ ವಿಘ್ನವಾಗಿದ್ದನು,[8] ಸೋತು, ಚದರಿ ಹೋಗಿದ್ದ ಇಸ್ರಾಯೇಲ್ಯರಿಗೆ ಇವನೇ ಮುಖ್ಯ ಕೇಂದ್ರವಾಗಿದ್ದನು. ಉತ್ತರದಲ್ಲಿದ್ದವರು ದಾವೀದನನ್ನೆ ಅರಸನನ್ನಾಗಿ[9] ಮಾಡಬೇಕೆಂದು ಬಯಸಿದ್ದರು; ಹಾಗೂ ಅಬ್ನೇರನು ಹಿಂದಿನಿಂದ ದಾವೀದನಿಗೆ ಸಹಾಯ ಮಾಡಬಹುದಿತ್ತು. ಆದರೆ ಅವನಿಗೆ ಸಹಾಯ ಮಾಡದೆ ತನ್ನದೇ ಆದ ಉದ್ದೇಶವನಿಟ್ಟು ಕೊಂಡಿದ್ದನು.

ಅಬ್ನೇರನನ್ನು ಮನ ಒಲಿಸಲು ಕಷ್ಟಕರವಾಗಿತು. ಆದಾಗ್ಯೂ ಅವನು ಧೈರ್ಯವಂತನು ಉತ್ತಮ ಸೈನ್ಯಾಧಿಕಾರಿ, ತನ್ನ ನಾಯಕರಿಗೆ ಯಥಾರ್ಥವಾದವನು ಇದು ಅವನಲ್ಲಿ ಹೆಮ್ಮೆಪಡುವ ವಿಷಯವಾಗಿತ್ತು. ಆತನು ಮರಣ ಹೊಂದಿದಾಗ, ಅವನ ವಿಷಯದಲ್ಲಿ ದಾವೀದನು "ಅವನು ಪ್ರಭುವೂ ಮತ್ತು ಮಹಾಪುರುಷನೂ" ಎಂದು ಕರೆದನು (2 ಸಮುವೇಲ 3:38).[10] ಸೌಲನ ನಿರಾಕರಿಸಿ ದಾವೀದನನ್ನು ದೇವರು ಮುಂದಿನ ಅರಸನನ್ನಾಗಿ ನೇಮಿಸುವನು ಎಂದು ಅಬ್ನೇರನಿಗೆ ತಿಳಿದಿತ್ತು.[11]

ಆದಾಗ್ಯೂ ಯಾಕೆ ಅಬ್ನೇರನು ದಾವೀದನಿಗೆ ಸಹಕರಿಸಲಿಲ್ಲ? ಬಹುಶ ಅವನು ಸೌಲನ ನೆನಪಿನಲ್ಲಿ ಯಥಾರ್ಥವಾಗಿರಲು ಬಯಸಿದನು. ಬಹುಶ (ಅನೇಕರು ಯೋಚಿಸುವಂತೆ) ಅವನು ಸ್ವಾರ್ಥದಿಂದ ತುಂಬಿದವನಾಗಿದ್ದನು 3:6ರಲ್ಲಿ "ಸೌಲನ ವಂಶದವರಿಗೂ ದಾವೀದನ ವಂಶದವರಿಗೂ ... ಯುದ್ಧ ನಡೆಯುತ್ತಿದ್ದಾಗ ಸೌಲನ ವಂಶದವರಲ್ಲಿ ಅಬ್ನೇರನೇ ಬಲಿಷ್ಠನಾಗಿದ್ದನು." ಅಬ್ನೇರನು ಸೌಲನಿಗೆ ಸಂಬಂಧಿಯಾಗಿದ್ದನು[12]; ಒಂದು ವೇಳೆ ಮುಂದಿನ ಅರಸನಾಗುವದಕ್ಕೆ ಭರವಸೆ ಹೊಂದಿದ್ದನು.

ಅಬ್ನೇರನ ವಿಷಯದಲ್ಲಿ ಏನೇ ಕಾರಣವಿದ್ದರೂ, ಇಸ್ರಾಯೇಲ್ಯರ ಮಧ್ಯದಲ್ಲಿ ಜರುಗುತ್ತಿದ್ದ ಯುದ್ಧಕ್ಕೆ ಅವನೇ ಕಾರಣನಾಗಿದ್ದನು. ಅದು ಅನೇಕ ವರ್ಷಗಳ ಕಾಲ ಮುಂದುವರೆದಿತ್ತು. ಯೂದಾಯದವರ ನಡುವೆ ಯುದ್ಧವಾಗುವದಕ್ಕೆ ಪ್ರಚೋದನೆ ನೀಡುತ್ತಿದ್ದನು. 2:12-32ರಲ್ಲಿ, ಆತನು ಮಾಡಿದ ಒಂದು ಯುದ್ಧದ ಬಗ್ಗೆ ನೋಡುತ್ತೇವೆ. ಅಬ್ನೇರನು, ಅವನ ಜನರು ಯೋವಾಬನನ್ನು[13] ಅವನ ಜನರನ್ನು ಯೆರೂಸಲೇಮಿನ ಉತ್ತರಕ್ಕಿದ್ದ ಗಿಬ್ಯೋನಿನ ಸುಂದರ ಕೊಳದ ಬಳಿ ಸಂಧಿಸಿದರು. ಯೋವಾಬನ ಜೊತೆಯಲ್ಲಿ ಅವನ ಸಹೋದರರಾದ ಅಭಿಷೈ[14] ಮತ್ತು ಅಸಾಹೇಲನು; ಅವರಿಬ್ಬರು ದಾವೀದನ ಸಂಬಂಧಿಕರಾಗಿದ್ದರು.[15] ಯುದ್ಧ ಮಾಡುವ ಬದಲು, ಎರಡು ಕಡೆಯಿಂದ ಹನ್ನೆರಡು ಮಂದಿ ಎದುರಾಗಿ ಬಂದು ಹೋರಾಟ ಮಾಡಲಿ. ದಾವೀದನೂ ಗಿಲ್ಯಾತರು ಮಾಡಿದ ಹೋರಾಟ ದಂಡಿತ್ತು. ಹೇಗೂ ಪೂರ್ತಿ ಹೋರಾಟವಾದ ಮೇಲೆ, ಯೋವಾಬನ ಕಡೆಯವರು ಜಯಗಳಿಸಿದರು.[16]

ಅಬ್ನೇರನು ಅವನ ಜನರು ತಪ್ಪಿಸಿಕೊಂಡು ಓಡಿಹೋಗುವಾಗ, ಯೋವಾಬನ ಸಹೋದರನಾದ ಅಸಾಹೇಲನು ಜಿಂಕೆಯಂತೆ - ಅನುಭವಿ ಓಟಗಾರನಂತೆ - ಅಬ್ನೇರನನ್ನು ಬೆನ್ನಟ್ಟಿದನು. ವಯಸ್ಸಾದಂತ ಯುದ್ಧವೀರನು, ಅವನನ್ನು ಕೊಲ್ಲಲು ಮನಸ್ಸಿಲ್ಲದೆ ಬೆನ್ನಟ್ಟಬೇಡ ಎಂದು ಬೇಡಿಕೊಂಡನು (2:22), ಅವನು ಇದಕ್ಕೆ ಕಿವಿಗೊಡದೇ ಹೋದಾಗ, ಹಿಂದಿನಿಂದ ಅವನ ಬೆನ್ನನ್ನು ಬರ್ಜಿಯಿಂದ ತಿವಿದನು (2:23).[17] ಈ ಕಾರಣದಿಂದ ಅವನನ್ನು ಬೆನ್ನಟ್ಟುವದು ನಿಧಾನವಾದಾಗ, ಅಬ್ನೇರನು ಅವನ ಜನರು ತಿರುಗಿ ಗುಂಪಾಗುವದಕ್ಕೆ ಅವಕಾಶವಾಯಿತು. ಆದರೆ ಯೋವಾಬನು ಅವನ ಜನರು ಅಬ್ನೇರನನ್ನು ಸಂಧಿಸಿದಾಗ ಅಬ್ನೇರನು ಯೋವಾಬನೊಂದಿಗೆ ಮಾತನಾಡಿ, ನಾವುಗಳು ರಕ್ತವನ್ನು ಸುರಿಸುವದು ಅವಶ್ಯವಿಲ್ಲದಲಿಂದ ಮನೆಗೆ ಹಿಂದಿರುಗೋಣ ಅಂದನು.

ಉತ್ತರ ಭಾಗದಲ್ಲಿದ್ದ ಕುಲಗಳಿಗೆ ಯೂದಾ ಕುಲವು ಅಡಿಯಾಳುಗಳಾಗಿರಬೇಕು. ಅಬ್ನೇರನ ಯೋಜನೆಯು ವಿಫಲವಾಯಿತು, ಯಾಕೆಂದರೆ ದೇವರು ದಾವೀದನ ಸಂಗಡ ಇದ್ದನು. 3:1ರಲ್ಲಿ "ಬಹು ದಿವಸಗಳವರೆಗೆ ಸೌಲನ ವಂಶದವರಿಗೂ ದಾವೀದನ ವಂಶದವರಿಗೂ ಯುದ್ಧ ನಡೆದಿತ್ತು. ದಾವೀದನು ಬಲಗೊಳ್ಳುತ್ತಾ ಬಂದನು, ಸೌಲನ ವಂಶವು ದುರ್ಬಲವಾಗುತ್ತಾ ಬಂದಿತು."

ಐದೂವರೆ ವರ್ಷಗಳ ನಂತರ, ಅಬ್ನೇರನು ಹೊಸ ತಂತ್ರವನ್ನು ಮಾಡಿ ಸೌಲನ ಮಗನನ್ನು ಉತ್ತರದಲ್ಲಿದ್ದ ಕುಲಗಳಿಗೆ ಅರಸನನ್ನಾಗಿ ನೇಮಿಸಿದನು.[18]

> ಸೌಲನ ಸೇನಾಪತಿಯೂ ನೇರನ ಮಗನೂ ಆದ ಅಬ್ನೇರನು ಸೌಲನ ಮಗನಾದ ಈಷ್ಬೋಶೆತನನ್ನು ಹೊಳೆಯ ಆಚೆಯಲ್ಲಿರುವ ಮಹನಯಿಮಿಗೆ ಒಯ್ದು,[19] ... ಎಲ್ಲಾ ಇಸ್ರಾಯೇಲ್ಯರ ಮೇಲೆಯೂ ಅರಸನನ್ನಾಗಿ ಮಾಡಿದನು ... ಸೌಲನ ಮಗನಾದ ಈಷ್ಬೋಶೆತನು ಅರಸನಾದಾಗ ನಾಲ್ವತ್ತು ವರುಷದವನಾಗಿದ್ದಾಗ, ಇಸ್ರಾಯೇಲ್ಯರನ್ನು ಆಳ ತೊಡಗಿ, ಎರಡು ವರ್ಷ ರಾಜ್ಯಭಾರ ಮಾಡಿದನು ... (2:8-10).

ಸೌಲನಿಗೆ ಈಷ್ಬೋಶೆತ್ ಎಂಬ ಮಗನಿರುವ ಬಗ್ಗೆ ಇದೇ ಮೊದಲ ಸಾಲಿ ಬರೆಯಲ್ಪಟ್ಟಿದೆ[20] (ಅಥವಾ ಇಶಾಬಾಲ್[21]). ಯುದ್ಧದಲ್ಲಿ ಮಡಿದ ಮೂರು ಜನ ಮಕ್ಕಳಿಗಿಂತ ಇವನು ಚಿಕ್ಕವನಾಗಿದ್ದನು.[22] ಹೇಗೂ ಗಿಲ್ಬೋವ ಬೆಟ್ಟದಲ್ಲಿ ಇವನ ತಂದೆ ಸೌಲನು, ಹಾಗೂ ಅಣ್ಣಂದಿರು ಹತರಾದಾಗ, ಇವನು ಮರಣದಿಂದ ತಪ್ಪಿಸಿಕೊಂಡಿದ್ದನು. ಒಂದು ವೇಳೆ ಇವನು ಬಲಹೀನನಾಗಿದ್ದರಿಂದ ಯುದ್ಧಕ್ಕೆ ಹೋಗಿರಲಿಲ್ಲ.[23]

ಈಷ್ಬೋಶೆತನು ಹೆಸರಿಗೆ ಮಾತ್ರ ಅರಸನಾಗಿದ್ದನು. ಆಡಳಿತವೆಲ್ಲವು ಅಬ್ನೇರನ ಅಧಿಕಾರದಲ್ಲಿತ್ತು. ಇದು ನಿರಂತರವಾಗಿ ನಡೆಯಲು ಸಾಧ್ಯವಿತ್ತು. ಇದಕ್ಕೆ ಕಾರಣ ದಾವೀದನು ಅವರನ್ನು ಐಕ್ಯವಾಗಿಡಲು ಸಾಧ್ಯವಾಗಿರಲಿಲ್ಲ. ಇದಕ್ಕಿದ್ದ ಹಾಗೆ ಸ್ವಾಭಾವಿಕ ಬದಲಾವಣೆ ಉಂಟಾಯಿತು, ಇದಕ್ಕೆ ಕಾರಣವೇನೆಂದರೆ ಮನುಷ್ಯರ ಕಾರ್ಯಗಳ ಮಧ್ಯದಲ್ಲಿ ದೇವರ ಹಸ್ತವು ಕಾರ್ಯಮಾಡಲು ಪ್ರಾರಂಭಿಸಿತು. ಒಂದು ದಿನ ಅಬ್ನೇರನು ಅವನ ತಂದೆಯಾದ ಸೌಲನ ಉಪ ಪತ್ನಿಯರಲ್ಲಿ ಒಬ್ಬಳ ಬಳಿ ಹೋಗಿ ಬಂದದಕ್ಕೆ ಅವನನ್ನು ಈಷ್ಬೋಶೆತನು ಶಪಿಸಿದನು.[24] ಈ ಸಂಗತಿಯು ಆಕೆಯ ಮನೆಯನ್ನು ಮತ್ತು ಸಿಂಹಾಸನವನ್ನು ಒಳಪಡಿಸಿಕೊಳ್ಳುವ ಸೂಚನೆಯಾಗಿತ್ತು. ಅದು ದೇಶಕ್ಕೆ ಎಸಗದ ಅಪರಾಧವಾಗಿತ್ತು ಆದುದರಿಂದ ಈ ಮಾತಿಗೆ ಅಬ್ನೇರನು ಕೋಪಗೊಂಡನು.

> "ಅಬ್ನೇರನು ಈ ಮಾತನ್ನು ಕೇಳಿ ಉರಿಗೊಂಡು ಈಷ್ಬೋಶೆತನಿಗೆ - ಈ ವರೆಗೆ ನಾನು ನಿನ್ನ ತಂದೆಯಾದ ಸೌಲನ ಕುಟುಂಬಕ್ಕೂ ಅವನ ಬಂಧು ಮಿತ್ರರಿಗೂ ದಯೆತೋರಿಸುತ್ತಿದ್ದೆನಲ್ಲಾ; ನಿನ್ನನ್ನು ದಾವೀದನ ಕೈಗೆ ಒಪ್ಪಿಸಿಕೊಡಲಿಲ್ಲವಷ್ಟೆ. ಈಗ ಈ ಹೆಂಗಸಿನ

ದೆಸೆಯಿಂದ ನನ್ನಲ್ಲಿ ತಪ್ಪು ಹಿಡಿಯುವದಕ್ಕೆ ನಾನೇನು ಯೆಹೂದನಾಯಿಯ ತಲೆಯೋ? ನಾನು ಅರಸುತನವನ್ನು ಸೌಲನ ಕುಟುಂಬದಿಂದ ತೆಗೆದು ದಾನಿನಿಂದ ಬೇರ್ಷೆಬದ ವರೆಗಿರುವ ಎಲ್ಲಾ ಇಸ್ರಾಯೇಲ್ಯರಲ್ಲಿಯೂ ಯೆಹೂದ್ಯರಲ್ಲಿಯೂ ದಾವೀದನ ಸಿಂಹಾಸನವನ್ನು ಸ್ಥಿರಪಡಿಸಿ ಯೆಹೋವನಾದ ದೇವರು ದಾವೀದನಿಗೆ ಮಾಡಿದ ವಾಗ್ದಾನವನ್ನು ನೆರವೇರಿಸದೆ ಹೋದರೆ ಆತನು ನನಗೆ ಬೇಕಾದದ್ದನ್ನು ಮಾಡಲಿ ಅಂದನು" (3:8-10; LB).

ಈಷ್ಬೋಶೆತನನ್ನು ಅರಸನನ್ನಾಗಿ ನೇಮಿಸಿದ್ದಕ್ಕೆ ಅಬ್ನೇರನಿಗೆ ಬೇಸರವುಂಟಾಯಿತು. ಯಾಕೆಂದರೆ ಉತ್ತರ ಪಾಲೇಸ್ತಿನನಲ್ಲಿ ನಿರ್ಣಾಮವಾಗುತ್ತಿದ್ದ ನಿರೀಕ್ಷೆಯನ್ನು ಚೇತನ ಗೊಳಿಸಲು ಸೌಲನ ಜನರನ್ನು ಕಾಪಾಡಲು ಅವನ ಕೈಯಲ್ಲಿ ಸಾಧ್ಯವಾಗಿರಲಿಲ್ಲ, ಹೇಗೂ ಈಷ್ಬೋಶೆತನು ಅವನಿಗೆ ವಿರುದ್ಧವಾಗಿ ತಿರುಗಿಬಿದ್ದನು. ಅಬ್ನೇರನು ತನ್ನ ಉದ್ದೇಶ ನೆರವೇರ ಲಿಲ್ಲವೆಂದು ತಿಳಿದು, ಈ ಹೀನ ಅವಕಾಶವನ್ನು ಉಪಯೋಗಿಸಿಕೊಂಡು ದಾವೀದನಿಗೆ ಸಹಾಯ ಮಾಡಲು, ದೂತರ ಮೂಲಕ ಸಂದೇಶವನ್ನು ಕಳುಹಿಸಿದನು.[25]

ದಾವೀದನಿಗೆ ಉಂಟಾದ ಆಶ್ಚರ್ಯವನ್ನು ಊಹಿಸಿಕೊಳ್ಳಿ? ಪ್ರತಿದಿನ ಸಾಯಂಕಾಲ "ದೇವರೊಂದಿಗೆ ಪ್ರಾರ್ಥಿಸಿ ದೇವರೇ ಸಹೋದರನನ್ನು ಸಹೋದರನೇ ಕೊಲ್ಲುವಂತ ಈ ಪರಿಸ್ಥಿತಿಯು ಎಷ್ಟು ದಿನಗಳ ಕಾಲ ಮುಂದುವರಿಯುತ್ತದೆ?" ಇದಕ್ಕೆ ಅಂತ್ಯವನ್ನು ಕಾಣದ ಪರಿಸ್ಥಿತಿಯಲ್ಲಿ ದಾವೀದನು ಇರುವಾಗ, ಅಬ್ನೇರನಿಂದ ಸಮಾಧಾನದ ಮಾತುಗಳು ಬಂದವು. ದಾವೀದನು ಇದನ್ನು ಅಬ್ನೇರನಿಂದ ಬಯಸಲಿಲ್ಲ. ನೋಡಿ ದೇವರು ಮಾಡುವಂಥ ಕಾರ್ಯಗಳು ಅದ್ಭುತವಲ್ಲವೇ?[26]

ದಾವೀದನು ಅಬ್ನೇರನ ಸಮಾಧಾನದ ಮಾತುಗಳಿಗೆ ಪ್ರತಿಕ್ರಿಯಿಸಿದನು.[27] ಅಬ್ನೇರನು ಎಚ್ಚರಿಕೆಯುಳ್ಳ ಆಸಕ್ತಿಯಿಂದ ದಾವೀದನ ರಾಜದಾನಿಯಾದ ಹೆಬ್ರೋನಿಗೆ ಬಂದನು. ಅನೇಕ ವರ್ಷಗಳು ವೈರಿಗಳಾಗಿದ್ದವರು ಈಗ ಮುಖಾಮುಖಿಯಾಗಿ ಎದುರುಗೊಳ್ಳುವಾಗ ದಾವೀದನು ಈ ಸಮಾಧಾನದ ಪರಿಸ್ಥಿತಿಯನ್ನು ಆಶೆಯಿಂದಲೂ, ಕೃಪೆಯಿಂದಲೂ, ಸ್ವೀಕರಿಸಿ,[28] ಅವನಿಗೂ ಅವನ ಜನರಿಗೂ ಬೋಜನ ಸಿದ್ಧ ಮಾಡಿದ ಮನೆಗೆ ಕರೆದೊಯ್ದನು ವಾಗ್ವಾದದ ಮೇಜಿಗಿಂತಲೂ, ಊಟದ ಮೇಜಿನಲ್ಲಿ ವ್ಯತ್ಯಾಸಗಳು ಶಮನಗೊಳ್ಳುತ್ತವೆ ಎಂದು ಅನೇಕ ನಾಯಕರುಗಳಿಗೆ ತಿಳಿದಂತ ವಿಷಯವಾಗಿರುತ್ತದೆ.

ಅಲ್ಲಿ ಎಲ್ಲವೂ ಸಮಾಧಾನಕರವಾಗಿ ನಡೆಯುತ್ತಿರುವಾಗ ಅಬ್ನೇರನು ದಾವೀದನಿಗೆ "ನಾನು ಹೊರಟು ಹೋಗಿ ಇಸ್ರಾಯೇಲ್ಯರನ್ನೆಲ್ಲಾ ಕೂಡಿಸಿ ನನ್ನ ಒಡೆಯನಾದ ಅರಸನ ಬಳಿಗೆ ಕರಕೊಂಡು ಬರುವೆನು; ಅವರು ನಿನ್ನ ಸಂಗಡ ಒಡಂಬಡಿಕೆ ಮಾಡಿಕೊಳ್ಳುವರು" (3:21ಎ). ನೀನು ನಿನ್ನ ಅಪೇಕ್ಷೆಯಂತೆ ಎಲ್ಲರ ಮೇಲೆ ದೊರೆತನ ಮಾಡಬಹುದು ಎಂದು ಹೇಳಲು "ದಾವೀದನು ಅವನನ್ನು ಸುರಕ್ಷಿತವಾಗಿ ಕಳುಹಿಸಿಕೊಟ್ಟನು" (3:21ಬಿ; NEB). ಅನೇಕ ವರ್ಷಗಳ ಅಂತರ್ಯುದ್ಧದ ನಂತರ, ಐಕ್ಯತೆಯು ಉಂಟಾಯಿತು.

ನಮ್ಮ ದೇಶವು ಭಯಂಕರವಾದ ಅಂತರ್ಯುದ್ಧಲ್ಲಿ ಇರುವಾಗ, ದೇಶವನ್ನು ಒಗ್ಗಟ್ಟಾಗಿ ಮಾಡುವ ಅವಶ್ಯಕತೆಯ ಬಗ್ಗೆ ಯೇಸು ಕ್ರಿಸ್ತನು ಹೇಳಿದಂತ ಮಾತುಗ ಳನ್ನು ಅಬ್ರಾಹಾಮ್ ಲಿಂಕನ್ನ್‌ರು ಉಚ್ಚರಿಸಿದ್ದರು: "ಒಂದು ರಾಜ್ಯದಲ್ಲಿ ಬೇಧಹುಟ್ಟಿದರೆ ಆ ರಾಜ್ಯವು ಉಳಿಯಲಾರದು; ಒಂದು ಮನೆಯಲ್ಲಿ ಬೇಧಹುಟ್ಟಿದರೆ ಆ ಮನೆಯು ನಿಲ್ಲಲಾರದು" (ಮಾರ್ಕ 3:24, 25). ಲಿಂಕನ್ನ್‌ರಿಗೂ ತಿಳಿದಿತ್ತು, ದಾವೀದನಿಗೂ ತಿಳಿದಿತ್ತು, ಬೇಧ ಹುಟ್ಟಿದ ದೇಶವು ಸರ್ವನಾಶದ ಬೀಜವನ್ನು ಹೊಂದಿರುತ್ತದೆ. ಈ ಸಿದ್ಧಾಂತವು ದೇಶಕ್ಕೆ ಹೇಗೆ ಅನ್ವಯಿಸುತ್ತದೋ ಅದೇ ರೀತಿ ಯಲ್ಲಿ ಎಲ್ಲಾ ಗುಂಪಿನ ಜನರಿಗೂ ಕುಟುಂಬಗಳಿಗೂ ಸಭೆಗಳಿಗೂ ಸಭಾನಾಯಕರಿಗೂ ರಾಜಕೀಯ ನಾಯಕರುಗಳಿಗೂ ಅನ್ವಯಿಸುತ್ತದೆ. ಎಲ್ಲರಲ್ಲಿಯೂ ಐಕ್ಯತೆಯೇ ಪ್ರಥಮ ಆದ್ಯತೆಯಾಗಿರಬೇಕು.

## ವಿವೇಕಿಗಳಾದ ನಾಯಕರುಗಳು ಕಷ್ಟದ ಪರಿಸ್ಥಿತಿಯನ್ನು ಹತೋಟಿಯಲ್ಲಿಡುತ್ತಾರೆ (2 ಸಮುವೇಲ 3:22-37)

ಒಂದು ವೇಳೆ ಇದು ಕಟ್ಟು ಕಥೆಯಾಗಿದ್ದರೆ, ಇದರ ಬಗ್ಗೆ ನನ್ನ ತಿಳುವಳಿಕೆ ಅಬ್ನೇರನು ಉತ್ತರದಲ್ಲಿ ಸಂಚಲಿಸಿ ಅವರನ್ನು ಹೆಬ್ರೋನಿಗೆ ಕರೆ ತಂದು ದಾವೀದನನ್ನು ಇಸ್ರಾಯೇಲ್ಯರ ಅರಸನನ್ನಾಗಿ ನೇಮಿಸಿದನು. ಜೀವಿತವು ಕಟ್ಟು ಕಥೆಯಲ್ಲ ಹಳೇ ವೈರಿಯ ಜೊತೆಯಲ್ಲಿ ಊಟ ಮಾಡಿದಷ್ಟು ಐಕ್ಯತೆಯ ದಾರಿ ಸರಳವಲ್ಲ. ನಿರೀಕ್ಷಿಸದ ತಿರುವುಗಳು, ಅಡೆತಡೆಗಳು ಅಡ್ಡ ಬರುತ್ತವೆ. ಕೆಲವು ಸಾರಿ ಯಾವದಾರಿಯಲ್ಲಿದ್ದೇವೆ ಎಂದು ತಿಳಿದು ಪುನ ಬೇರೆ ದಾರಿಗೆ ಹೋಗಬೇಕಾಗುತ್ತದೆ; ನಾಯಕರುಗಳು ಇಷ್ಟವಿಲ್ಲದವುಗಳನ್ನು ನಿರೀಕ್ಷಿಸಬೇಕಾಗುತ್ತದೆ ಆದರೆ, ಬೇಗ ನಿರ್ಧಾರ ಮಾಡಲು ಸಿದ್ಧರಾಗಬೇಕಾಗುತ್ತದೆ.

2 ಸಮುವೇಲ 3 ಈ ವಚನಗಳಲ್ಲಿ ಅಬ್ನೇರನು ದಾವೀದನನ್ನು ಸಂಧಿಸಿದಾಗ; ಯೋವಾಬನು ಹೆಬ್ರೋನಿನಲ್ಲಿರಲಿಲ್ಲ ಯೋವಾಬನು ಅವನ ಜನರು ದಾಳಿಮಾಡಲು ಹೋಗಿದ್ದರು. (ಒಂದು ವೇಳೆ ಅಬ್ನೇರನನ್ನು ಸಂಧಿಸಲು ಯೋವಾಬನು ತೊಡಕಾಗಬಹುದು ಎಂದು ಹೇಳಿ ದಾವೀದನೇ ಯೋವಾಬನನ್ನು ವಿಚಾರಮಾಡಲು ಕಳುಹಿಸಿರಬಹುದು ಅನ್ನುವಂಥದ್ದು ಒಂದು ಯೋಚನೆ.) ಯೋವಾಬನು ಹಿಂದಿರುಗಿದಾಗ, ದಾವೀದನು ಅಬ್ನೇರನಿಗೆ "ಸಮಾಧಾನದ ಸತ್ಕಾರಮಾಡಿ," ಅವನನ್ನು ಸಮಾಧಾನದಿಂದ ಹೊಗಗೊಡಿಸಿದ ವಿಷಯವನ್ನು ತಿಳಿದು, ದಾವೀದನ ಸಿಂಹಾಸನದ ಬಳಿಗೆ ವೇಗವಾಗಿ ಬಂದು ಅರಸನೇ ಅಬ್ನೇರನ ಆಲೋಚನೆಗಳು ಕುಯುಕ್ತಿಯಿಂದ ತುಂಬಿದ್ದವು. ಅವನು ಗೂಡಾಚಾರಿಯಾಗಿ ಬಂದಿದ್ದನು. ಅರಸನೇ ಈ ಅವಕಾಶವನ್ನು ಉಪಯೋಗಿಸಿಕೊಂಡು ಅವನನ್ನು ಹಿಡಿಯಬಹುದಾಗಿತ್ತು ಅಂದನು.

ಯೋವಾಬನು ದಾವೀದನಿಗೆ ಮುಳ್ಳಾಗಿದ್ದನು.[29] ಒಂದು ಕಡೆ ಅವನು ಅದ್ಭುತವಾದ ಭಟನೂ ಭಯವಿಲ್ಲದ ಪ್ರೋತ್ಸಾಹದ ನಾಯಕನು ಅರಸನಿಗಾಗಿ ಪ್ರಾಣ ತ್ಯಾಗ ಮಾಡಲು ಸಿದ್ಧವಾದವನು ಆಗಿದ್ದನು. ಇನ್ನೊಂದು ಕಡೆ ಅವನು ಸ್ವಾರ್ಥಿ ಮುಯ್ಯಿಗೆ ಮುಯ್ಯಿ ತೀರಿಸುವವನು, ಅವಿಧೇಯನು ಕೆಲವು ಆತ್ಮೀಕ ವಿಷಯಗಳಿಂದಲೂ ತುಂಬಿದ್ದನು.[30] ಎಲ್ಲಾ ನಾಯಕರುಗಳಲ್ಲಿ ಯೋವಾಬನಿದ್ದಾನೆ: ಇಂಥ ಯೋಚನೆಗಳಿಂದ ಬದುಕಲಾರರು ಈ ಯೋಚನೆಗಳಿಲ್ಲದೆ ಬದುಕಲಾರರು. ನಿನ್ನ ನಾಯಕತ್ವದ ವಿಜಯವು ನಿನ್ನೊಳಗಿರುವ ಯೋವಾಬನನ್ನು ನಡೆಸಿಕೊಳ್ಳುವದರ ಮೇಲೆ ಅವಲಂಬಿತವಾಗಿದೆ.

ಜನರನ್ನು ಐಕ್ಯತೆಗೆ ತರಲು ಸುಮಾರು ಏಳು ವರುಷಗಳು ಬೇಕಾದವು ಆದರೆ ಯೋವಾಬನು ಒಂದು ಘಂಟೆಯ ಅಂತರದಲ್ಲಿ ಆ ಐಕ್ಯತೆಯನ್ನು ನಾಶ ಮಾಡಿದನು. ಅಬ್ನೇರನು ಒಂದು ಅಥವಾ ಎರಡು ಮೈಲು ನಡೆದು ಹೋಗುವಷ್ಟರಲ್ಲಿ ದಾವೀದನು ಅವನನ್ನು ನೋಡಬೇಕಾಗಿರುವದರಿಂದ, ಹಿಂದಕ್ಕೆ ಬರಲು ಯೋವಾಬನು ಕರೆಕಳುಹಿಸಿದನು. ಯಾವುದೇ ಸಂದೇಹವಿಲ್ಲದೆ ಅಬ್ನೇರನು ಹಿಂದಿರುಗಿದನು, ಯೋವಾಬನು ಅವನನ್ನು ಸಂಧಿಸಿ, "ಮಾತನಾಡಲು ಪಕ್ಕಕ್ಕೆ ಕರೆದು ಕೊಂಡುಹೋದನು" (3:27). ಅಬ್ನೇರನು ದಾವೀದನ ಸಂದೇಶಕ್ಕಾಗಿ ಕಾಯುತ್ತಿರಲು, ಯೋವಾಬನು ತನ್ನ ಅಯುಧದಿಂದ ಅವನನ್ನು ತಿವಿದನು. ಯೋವಾಬನ ಸಹೋದರನು ಮರಣಹೊಂದಿದಂತೆ ಅಬ್ನೇರನು ಸಹ ಮರಣ ಹೊಂದಿದನು.[31]

ಮನಸ್ಸು ಮುಯ್ಯಿ ತೀರಿಸುವದಕ್ಕೆ ಹಾತೊರೆಯುವಾಗ, "ಒಬ್ಬನು ಒಂದು ಗಳಿಗೆ ನಿಂತು ಅದರ ಪ್ರತಿಫಲವೇನು ಎಂಬುದಾಗಿ ಯೋಚಿಸಬೇಕು ಎಂದು" ಮೊದಲ ಪಾಠದಲ್ಲಿ ತಿಳುವಳಿಕೆ ನೀಡಲಾಗಿದೆ. ಯೋವಾಬನು ಮುಯ್ಯಿ ತೀರಿಸಿದರೂ ಅದರ ಬೆಲೆ ಅಪರಿಚಿತವಾಗಿತ್ತು. ಈ ಸಮಯವು ದಾವೀದನು ಮತ್ತು ಅಬ್ನೇರನು ಸಂಧಿಸಿದ ಸಮಯಕ್ಕಿಂತ ಕಠೋರವಾಗಿತ್ತು. ದಾವೀದನು, ಅಬ್ನೇರನನ್ನು ಹೆಬ್ರೋನಿಗೆ ಆಹ್ವಾನಿಸಿ ಕೊಂದು ಹಾಕಿದನೆಂಬ ಸುದ್ದಿಯು ಎಲ್ಲಾ ಕಡೆಯಲ್ಲಿಯು ಪ್ರಚಾರವಾಯಿತು, ಮತ್ತು ದಾವೀದನು ನಂಬಿಕೆಗೆ ಅನರ್ಹನು ಎಂದು ಎಲ್ಲರಿಗೂ ತಿಳಿಯಿತು ಎಂದು ಆಲೋಚಿಸಿದನು.[32] ದಕ್ಷಿಣದವರನ್ನು ಉತ್ತರದವರನ್ನು

ಐಕ್ಯತೆಗೆ ನಡೆಸುವ ಕಾರ್ಯಕ್ಕೆ ದೈವ ಭಕ್ತಿಯಿಲ್ಲದ ಯೋವಾಬನ ಮುಯ್ಯಿ ತೀರಿಸುವಿಕೆಯೇ ಕಾರಣವಾಯಿತು.

ಈ ಇಂಥ ಸಂದಿಗ್ಧ ಸಮಯದಲ್ಲಿಯೇ ನಿಜವಾದ ನಾಯಕತ್ವದ ಗುಣ ಕಾಣುವಂಥದ್ದಾಗಿರುತ್ತದೆ. ದಾವೀದನ ಸದ್ಗುಣಕ್ಕಾಗಿ ಮಾತ್ರ ದೇವರು ಅವನನ್ನು ಕರೆ ಯದೆ ಸಂದಿಗ್ಧ ಪರಿಸ್ಥಿತಿಯನ್ನು ಜಾಣತನದಿಂದ ಎದುರಿಸುವಂಥ ಚಾಣಕ್ಯತನ ಅವನಲ್ಲಿ ಇದ್ದದರಿಂದಲೂ ದೇವರು ಅವನನ್ನು ಉಪಯೋಗಿಸಿದನು. ಇಂಥ ಸಂಘರ್ಷ ಸಮಯವನ್ನು ದಾವೀದನು ಹೇಗೆ ಹತೋಟಿಗೆ ತಂದನು ಎಂದು ಗಮನಿಸಿ.

ಮೊದಲನೆಯದಾಗಿ, ದಾವೀದನು ಕಾರ್ಯಾನ್ಮುಕನಾದನು. ನಾವು ಕೆಲವು ಸಾರಿ ಈ ಪರಿಸ್ಥಿತಿಗಳು ತಮಗೆ ತಾವೇ ಸರಿಯಾಗುತ್ತೇವೆ ಎಂದು ನೆನಸುತ್ತೇವೆ. ಆದರೆ ಆ ರೀತಿ ಆಗುವದಿಲ್ಲ ನಿಜವಾದ ನಾಯಕರುಗಳು ತಕ್ಷಣವೆ ಚುರುಕಾಗಿ ಕಾರ್ಯಾನ್ಮುಕರಾಗುತ್ತಾರೆ.

ಎರಡನೆಯದಾಗಿ, ಅಬ್ನೇರನ ವಧೆಯಲ್ಲಿ ನಾನೂ ನನ್ನ ರಾಜ್ಯವು ಯೆಹೋವನ ದೃಷ್ಟಿಯಲ್ಲಿ ಸದಾ ನಿರ್ದೋಷಿಗಳು ಎಂದು ದಾವೀದನು ಸಮರ್ಥಿಸಿಕೊಂಡನು (3:28), ಅದು ಅಲ್ಪವಾದರು, ಅದನ್ನು ದಾವೀದನು ಮಾಡಲೇಬೇಕಾಯಿತು.

ಮೂರನೆಯದಾಗಿ, ಅವನು ಯೋವಾಬನ ಕೃತ್ಯವನ್ನು ಖಂಡಿಸಿ, ಅವನನ್ನು ಅಧಿಕಾರದಿಂದ ಇಳಿಸಿದನು.[33] ಅವನನ್ನು ಅವನ ಕುಟುಂಬವನ್ನು ಶಪಿಸಿದನು. ಅವನ ಇತರೆ ಅಧಿಕಾರಿಗಳು ದಂಗೆ ಏಳಬಹುದು ಎಂದು ಯೋವಾಬನಿಗೆ ಕ್ರೂರ ಶಿಕ್ಷೆ ನೀಡಲಿಲ್ಲ.[34] ಯೋವಾಬನ ಕೃತ್ಯವನ್ನು ಯೆಹೋದ್ಯರು ಸಮರ್ಥಿಸಿಕೊಂಡರು. ಆ ದಿವಸಗಳಲ್ಲಿ "ಹಗುರ ವಾದ ಶಿಕ್ಷೆ" ಎಂದು ಪರಿಗಣಿಸಲಿಲ್ಲ. ದಾವೀದನು ಕಲಿತ ಪಾಠದಂತೆ ಕೆಲವು ಸಂಗತಿಗಳನ್ನು ದೇವರ ಕೈಗೆ ಒಪ್ಪಿಸಬೇಕಾಯಿತು. "ಯೆಹೋವನೇ ಕೆಡುಕರಿಗೆ ಮುಯ್ಯಿ ತೀರಿಸಲಿ" ಎಂದು ಹೇಳಿದನು (3:39ಬಿ).

ನಾಲ್ಕನೆಯದಾಗಿ, ಇದು ರಾಷ್ಟ್ರೀಯ ದುಖದ ದಿವಸ ಎಂದು ಹೇಳಿ ಸಕಲ ಗೌರವದಿಂದ ಅಬ್ನೇರನ ಶವವನ್ನು ಹೆಬ್ರೋನಿನಲ್ಲಿ ಸಮಾದಿ ಮಾಡಿದನು. ದಾವೀದನು ಯೋವಾಬನಿಗೂ ಅವನ ಸಂಗಡ ಇದ್ದ ಜನರಿಗೂ - ನೀವು ಗೋಣಿ ಬಟ್ಟೆಗಳನ್ನು ಧರಿಸಿ ಗೌರವದಿಂದ ಅಬ್ನೇರನ ಶವದ ಮುಂದೆ ನಡೆಯಿರಿ ಎಂದು ಆಜ್ಞಾಪಿಸಿ ಅವನು ಮಾತ್ರ ಅಬ್ನೇರನ ಚಟ್ಟದ ಹಿಂದೆ ಹೋದನು. (ಅಬ್ನೇರನ ಶವವನ್ನು ಇಟ್ಟ ಚಟ್ಟದ ಹಿಂದೆ) ಅವರು ರಾಜ ಬೀದಿಯ ಅಥವಾ ಸೈನಿಕರ ಬಟ್ಟೆಯನ್ನು ಧರಿಸಿ ಹೊರಡಲಿಲ್ಲ; ದಾವೀದನು ಗೋಣಿತಟ್ಟನ್ನು ಧರಿಸ ಬೇಕೆಂದು ಎಲ್ಲರಿಗೂ ಆಜ್ಞಾಪಿಸಿದನು.[35] (ಯೋವಾಬನು ಸಹ ಗೋಣಿತಾಟನ್ನು ಕಟ್ಟಿಕೊಂಡು ಗೌರವಸಲ್ಲಿಸಬೇಕಾಯಿತು. ಅವನು ಹೇಗೆ ಇದನ್ನು ಒಪ್ಪಿಕೊಂಡನು!) ದಾವೀದನು ಸಾಧಾರಣ ಬಟ್ಟೆಯನ್ನು ಧರಿಸಿದವನಾಗಿ ಸೌಲನಿಗೆ ಸೂಚಿಸಿದ ದುಖವನ್ನೇ ಅಬ್ನೇರನಿಗೂ ಸೂಚಿಸಿದನು. ಇನ್ನೊಂದು ಸಾರಿ, ಕೃಪೆಯುಳ್ಳ ದಾವೀದನ ಹೃದಯ ಶಾಂತಿಯನ್ನು ಬಯಸಿದ್ದಕ್ಕೆ ಈ ಕಾರ್ಯ ಸೂಚನೆಯಾಯಿತು. "ಈ ಹೊತ್ತು ಇಸ್ರಾಯೇಲ್ಯರಲ್ಲಿ ಹತವಾದ ವನು ಪ್ರಭುವೂ ಮಹಾಪುರುಷನೂ ಆಗಿದ್ದಾನೆಂದು ದುಖಪಟ್ಟನು" (3:38).

ಐದನೇಯದಾಗಿ, ದಾವೀದನು ದುಖದಲ್ಲಿಯೂ ಯಥಾರ್ಥತೆಯನ್ನು ತೋರ್ಪಡಿ ಸಿದನು, ಮತ್ತು ಅವನು ಬೋಜನವನ್ನು ಸಹ ಸ್ವೀಕರಿಸಲಿಲ್ಲ, ನಾನು ಒತ್ತಿ ಹೇಳುವುದೇ ನೆಂದರೆ, ಅವನು ನಾಟಕೀಯವಾದ ದುಖವನ್ನು ತೋರಿಸಲಿಲ್ಲ. ಯಾಕೆಂದರೆ ನಾವು ಮೋಸ ಮಾಡುವದಾದರೆ ಅದು ಬೇಗನೆ ಬೆಳಕಿಗೆ ಬರುತ್ತದೆ ಎಂದು ಫಿಲಿಷ್ಟಿಯದಲ್ಲಿ ಕಲಿತುಕೊಂಡಿದ್ದನು. ಇದನ್ನು ಜನರು ಗಮನಿಸುವವರಾಗಿದ್ದರು. ಆದುದರಿಂದ ದಾವೀದನ ದುಖ ನಿಜವಾದದ್ದಾಗಿತ್ತು. ಮುರಿದ ಮನಸ್ಸಿನಿಂದ ಅಬ್ನೇರನ ಮರಣಕ್ಕಾಗಿ ದುಖಿಸಿದನು.

ದಾವೀದನ ಈ ಜಾಣತನದ ನಿರ್ಧಾರದಿಂದ ಪರಿಣಾಮವೇನಾಯಿತು? ದಾವೀದನು ಅಬ್ನೇರನ ಕೊಲೆಯಲ್ಲಿ ಪಾಲುತೆಗೆದುಕೊಳ್ಳಲಿಲ್ಲ ಎಂದು ಅವನ ಜನರಿಗೆ ಸ್ಪಷ್ಟವಾಗಿ

ತಿಳಿಸುವದಕ್ಕೆ ದಾವೀದನು ಏನು ಮಾಡಿದನು.

ಪ್ರತಿ ನಾಯಕರಲ್ಲಿ ಧೈರ್ಯವು, ವಿವೇಕವು ಇರಬೇಕು, ದೇವರಿಗೆ ಸಮೀಪವಾಗಿದ್ದರೆ ಮಾತ್ರ ಇವೆರಡು ದೊರಕುತ್ತದೆ. ಯೆಹೋಶುವನು ಹೇಳುತ್ತಾನೆ,

> ಸ್ಥಿರಚಿತ್ತನಾಗಿರು, ಪೂರ್ಣಧೈರ್ಯದಿಂದಿರು ... ಧರ್ಮೋಪದೇಶವನ್ನು ಜಾಗರೂಕತೆಯಿಂದ ಕೈಕೊಂಡು ನಡೆ ... ಅದನ್ನು ಬಿಟ್ಟು ಎಡಕ್ಕಾದರೂ ಬಲಕ್ಕಾದರೂ ಹೋಗಬೇಡಿ. ಆಗ ನೀನು ಎಲ್ಲಿ ಹೋದರೂ ಕೃತಾರ್ಥನಾಗುವಿ. ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ; ಹಗಲಿರುಳು ಅದನ್ನು ಧ್ಯಾನಿಸುತ್ತಾ ಅದರಲ್ಲಿ ಬರೆದಿರುವದನ್ನೆಲ್ಲಾ ಕೈಕೊಂಡು ನಡಿ. ಆಗ ನಿನ್ನ ಮಾರ್ಗದಲೆಲ್ಲಾ ಸಫಲನಾಗುವಿ, ಕೃತಾರ್ಥನಾಗುವಿ. ... ನೀನು ಹೋಗುವಲೆಲ್ಲಾ ನಿನ್ನ ದೇವರಾದ ಯೆಹೋವನು ನಿನ್ನ ಸಂಗಡ ಇರುತ್ತಾನೆ ಎಂದು ಹೇಳಿದನು (ಯೆಹೋಶುವ 1:7-9).

ದೇವರ ಚಿತ್ತವನ್ನು ಕಲಿತು ಅದರಂತೆ ನಡೆಯುವದರಿಂದ ವಿವೇಕವು ಬರುತ್ತದೆ ಎಂದು ಹಳೇ ಒಡಂಬಡಿಕೆಯ ಜ್ಞಾನಿ ಹೇಳುತ್ತಿದ್ದನು.[36] "ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ" ಎಂದು ಯಾಕೋಬನು ಹೇಳುತ್ತಾನೆ (ಯಾಕೋಬ 1:5).

ಬೈಬಲ್ ಅಧ್ಯಯನ ಮತ್ತು ಪ್ರಾರ್ಥನೆಯಿಂದ ದೇವರು ಮತ್ತು ದೇವರ ಉದ್ದೇಶವನ್ನು ನಾವು ಸಂಪೂರ್ಣವಾಗಿ ಅರಿತಿಕೊಳ್ಳೋಣ. ಆದರಿಂದ ಸಂಕಟ ಸಮಯ ಬಂದಾಗ ಧೈರ್ಯದಿಂದ ಇರಬಹುದು.

## ವಿವೇಕಿಗಳಾದ ನಾಯಕರುಗಳು ತಮ್ಮ ಬಲಹೀನತೆಯ ಬಗ್ಗೆ ಸಂಕೋಚಪಡುವವರಲ್ಲ (2 ಸಮುವೇಲ 3:38, 39)

ಜನರಿಗೆ ಸಮಾಧಾನ ತರುವಂಥ ರೀತಿಯಲ್ಲಿ ದಾವೀದನು ತನ್ನ ಬಲಹೀನತೆಯನ್ನು ಒಪ್ಪಿಕೊಂಡಿದ್ದನು. 3:38, 39ರಲ್ಲಿ ಗಮನಿಸಿ: "ಅರಸನು ತನ್ನ ಸೇವಕರಿಗೆ ... ನಾನು ರಾಜ್ಯಾಭಿಷೇಕ ಹೊಂದಿದವನಾಗಿದ್ದರೂ ಈಗ ಏನೂ ಮಾಡಲಾರದವನಾಗಿರುತ್ತೇನೆ. ಚೆರೂಯಳ ಮಕ್ಕಳಾದ ಇವರು ನನ್ನ ಹತೋಟಿಗೆ ಬಾರದವರು" ಎಂದು ತಿಳಿಸಿದನು. ಅಬ್ನೇರನ ಕೊಲೆಯಲ್ಲಿ ತನ್ನ ಭಾಗ ಯಾವುದೇ ಇಲ್ಲವೆಂದು ಪ್ರಕಟಿಸಿದರು, ಅವನ ಜೊತೆಯವನು ಮಾಡಿದ ಕಾರ್ಯಕ್ಕೆ ತಾನೂ ಸಹ ಹೊಣೆಗಾರನು ಎಂದು ದಾವೀದನಿಗೆ ತಿಳಿದಿತ್ತು. ಇಲ್ಲಿ ದಾವೀದನು ಹೇಳುವಂತ ಮಾತೇನೆಂದರೆ "ನಾನು ನಿಜವಾಗಿಯು ಬಲವುಳ್ಳ ನಾಯಕನಾಗಿದ್ದರೆ ಯೋವಾಬನು ಇಂಥಾ ರಹಸ್ಯವಾದ ಕಾರ್ಯವನ್ನು ಮಾಡಲು ಸಾಧ್ಯ ವಾಗುತ್ತಿರಲಿಲ್ಲ (ಧೈರ್ಯಗೆಡುತ್ತಿರಲಿಲ್ಲ)."

ಕಾರ್ಯಗಳು ತಪ್ಪಾಗುವಾಗ ತಪ್ಪಿಸಿಕೊಳ್ಳುವ ಮಾರ್ಗವನ್ನು ಹುಡುಕದೇ ಇರುವ ನಾಯಕರುಗಳನ್ನು ನಾನು ಮೆಚ್ಚುತ್ತೇನೆ. ಗೆಲ್ಲುವ ಪಂದ್ಯವನ್ನು ಸೋತ ತಂಡದ, ಅಪಜಯವನ್ನು ಅದರ ತರಬೇತುದಾರನು ಹೊತ್ತು ಕೊಳ್ಳುವಂತೆ ತಪ್ಪು ಮಾಹಿತಿಯಿಂದ ಒಬ್ಬ ರಾಜಕಾರಣಿ ತಪ್ಪಾಗಿ ಕಾರ್ಯ ಮಾಡುವಂತೆ ಅಥವಾ ಸಮಸ್ಯೆಗೆ ಒಳಗಾದ ಒಬ್ಬ ಸಭಾಹಿರಿಯನಂತೆ ಸಾಮಾನ್ಯವಾಗಿ ಒಬ್ಬನು ತಪ್ಪು ಮಾಡಿ ಒಪ್ಪಿಕೊಂಡರೆ ಜನರು ಅವನಿಗೆ ಎರಡನೆಯ ಅವಕಾಶವನ್ನು ನೀಡುವರು ಆದರೆ ತಪ್ಪು ಮಾಡಿ ಅದರ ಜವಾಬ್ದಾರಿಯನ್ನು ಹೊರದವನಿಗೆ ಜನರಿಂದ ಮನ್ನಣೆ ದೊರಕಲಾರದು.

ದಾವೀದನು ತನ್ನ ಪರಿಮಿತಿಯನ್ನು ಒಪ್ಪಿಕೊಂಡದ್ದರಿಂದ; ಜನರ ಗೌರವವನ್ನು ಪಡಕೊಂಡನು. 2 ಕೊರಿಂಥ 12:9, 10ರಲ್ಲಿ ಪೌಲನು ತಿಳಿಸಿದ ಆತ್ಮವನ್ನು ಹೀರಿಕೊಂಡಿದ್ದನು:

> ಅದಕ್ಕಾತನು - ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲಿಯೇ ಬಲವು ಪೂರ್ಣಸಾಧಕವಾಗುತ್ತದೆ ಎಂದು ನನಗೆ ಹೇಳಿದ್ದಾನೆ. ಹೀಗಿರಲಾಗಿ ಕ್ರಿಸ್ತನ ಬಲವು ನನ್ನಲ್ಲಿ ನೆಲಸಿಕೊಂಡಿರಬೇಕೆಂದು ನನಗುಂಟಾಗುವ ನಿರ್ಬಲಾವಸ್ಥೆಗಳ ವಿಷಯದಲ್ಲಿಯೇ ಬಹುಸಂತೋಷವಾಗಿ ಹೆಚ್ಚಳಪಡುವೆನು. ಆದದರಿಂದ ಕ್ರಿಸ್ತನ ನಿಮಿತ್ತ ನನಗೆ ನಿರ್ಬಲಾವಸ್ಥೆಯೂ ತಿರಸ್ಕಾರವೂ ಕೊರತೆಯೂ ಹಿಂಸೆಯೂ ಇಕ್ಕಟ್ಟೂ ಸಂಭವಿಸಿದಾಗ ಸಂತುಷ್ಟನಾಗಿದ್ದೇನೆ. ನಾನು ಯಾವಾಗ ನಿರ್ಬಲನಾಗಿದ್ದೇನೋ ಆವಾಗಲೇ ಬಲವುಳ್ಳವನಾಗಿದ್ದೇನೆ.

ತನ್ನ ಬಲಹೀನತೆಯನ್ನು ಒಪ್ಪಿಕೊಳ್ಳದ ನಾಯಕನು ಅಭದ್ರನಾಗುವನು, ನಿಜವಾದ ನಾಯಕರುಗಳು ತಮ್ಮ ಬಲಹೀನತೆಯನ್ನು ಧೈರ್ಯವಾಗಿ ಒಪ್ಪಿಕೊಳ್ಳುವರು. ಆತ್ಮ ಪ್ರಜ್ಞೆಯುಳ್ಳ ನಾಯಕರು ತಮ್ಮ ನ್ಯೂನತೆಯನ್ನು ಒಪ್ಪಿಕೊಳ್ಳುವರು, ಮತ್ತು ವಿಶಾಲ ಮನಸ್ಸಿನಿಂದ ತಾವು ಮಾಡಿದ ತಪ್ಪನ್ನು ಅರಿಕೆ ಮಾಡುವರು.

## ವಿವೇಕವುಳ್ಳ ನಾಯಕರುಗಳು ಹಿಂಜರಿಕೆಯಲ್ಲಿಯೂ ಆತ್ಮ ಧೈರ್ಯವುಳ್ಳ ವರಾಗಿರುವರು (2 ಸಮುವೇಲ 4:1-5:5; 1 ಪೂರ್ವಕಾಲವೃತ್ತಾಂತ 11:1-3; 12:23-40)

ದಾವೀದನು ಅಬ್ನೇರನ ಮರಣದ ವಿಷಯವನ್ನು ಪರಿಹರಿಸಿದ ತಕ್ಷಣ ಆ ಪ್ರದೇಶದ ಬಾನಂಚಿನಲ್ಲಿ ದುಷ್ಟಪರಿಣಾಮವು ಉಲ್ಬಣಗೊಂಡಿತು. ಸೈನ್ಯದ ಅಧಿಕಾರಿಗಳಲ್ಲಿ ಇಬ್ಬರು ಸಹೋದರರು ಅಬ್ನೇರನ ಮರಣದ ಸುದ್ದಿಯನ್ನು ಕೇಳಿದೊಡನೆ, ದಾವೀದನನ್ನು ಮೆಚ್ಚಿಸುವದಕ್ಕಾಗಿ[37] ಒಂದು ಘೋರವಾದ ಯೋಜನೆಯನ್ನು ನಿರೂಪಿಸಿ ಅವರು ಮಧ್ಯಾಹ್ನದಲ್ಲಿ ಈಷ್ಬೋಶೆತನು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಮನೆಗೆ ಬಂದರು ಆಗ ಅಲ್ಲಿ ಕೆಲವರು ಅತ್ತಿತ್ತ ಓಡಾಡುತ್ತಿದ್ದರು.[38] ನಂತರ ಅವರು ನೇರವಾಗಿ ಅರಸನು ನಿದ್ರಿಸುತ್ತಿದ್ದ ಕೊಠಡಿಗೆ ಧೈರ್ಯವಾಗಿ ನುಗ್ಗಿ ಅವನನ್ನು ಕೊಂದರು. ಅವರು ಅವನ ತಲೆಯನ್ನು ಕತ್ತರಿಸಿಕೊಂಡು ರಾತ್ರಿಯಿಡಿ ಪ್ರಯಾಣಮಾಡಿ ದಾವೀದನಲ್ಲಿಗೆ ಬಂದರು.

ಅವರು ಈಷ್ಬೋಶೆತನ ತಲೆಯನ್ನು ದಾವೀದನ ಬಾಗಿಲಿನಲ್ಲಿ ತೋರಿಸಿದಾಗ, ಅತಿ ಬೇಗನೆ ಇಸ್ರಾಯೇಲ್ಯರ ಅರಸನಾಗಬೇಕಾಗಿದ್ದ ಮನುಷ್ಯನನ್ನು ಅಪಾರ್ಥ ಮಾಡಿಕೊಂಡರು. ದಾವೀದನು ಸಹ ಈ ಕೊಲೆಯಲ್ಲಿ ಪಾಲುದಾರನಾಗಿದ್ದಾನೆ ಎಂಬ ಸುದ್ದಿಯು ಜನರಿಗೆ ತಲುಪುವಷ್ಟರಲ್ಲಿ ದಾವೀದನು ಬೇಗನೆ ಕ್ರೀಯಾ ಶೀಲನಾಗಬೇಕಿತ್ತು. ಸೌಲನನ್ನು ಕೊಂದ ಅಮಾಲೇಕ್ಯರ ವಿಷಯವನ್ನು ಆ ಸಹೋದರರಿಗೆ ದಾವೀದನು ನೆನಪು ಮಾಡಿ ಕೊಟ್ಟನು. ಎಷ್ಟೋ ಹೆಚ್ಚಾಗಿ ದುಷ್ಟರು ನೀತಿವಂತನನ್ನು ಕೊಂದರು.[39] "ಮಹಾದುಷ್ಟರಾದ ನೀವು ನೀತಿವಂತನ ಮನೆ ಹೊಕ್ಕು, ಅವನನ್ನು ಅವನ ಮಂಚದ ಮೇಲೆಯೇ ಕೊಂದು ಹಾಕಿದ ಮೇಲೆ ಆ ರಕ್ತಾಪರಾಧಕ್ಕಾಗಿ ನಿಮಗೆ ಮುಯ್ಯಿತೀರಿಸುವದು ಎಷ್ಟೋ ಅಗತ್ಯವಾಗಿದೆ. ನನ್ನ ಪ್ರಾಣವನ್ನು ಎಲ್ಲಾ ಇಕ್ಕಟ್ಟುಗಳಿಂದ ಬಿಡಿಸಿದ ಯೆಹೋವನಾಣೆ, ನಿಮ್ಮನ್ನು ಭೂಲೋಕದಿಂದ ತೆಗೆದೇ ಬಿಡುವೆನು" (2 ಸಮುವೇಲ 4:11) ಎಂದು ಹೇಳಿದನು.

ಇಬ್ಬರು ಇವರನ್ನು ಕೊಂದು ಕೈಕಾಲುಗಳನ್ನು ಕತ್ತರಿಸಿ ಶವಗಳನ್ನು ಹೆಬ್ರೋನಿನ ಕೆರೆಯ ಬಳಿಯಲ್ಲಿ ನೇತುಹಾಕಿದರು. ದಾವೀದನು ಈ ಮೂಲಕ ಎರಡು ಸಂದೇಶಗಳನ್ನು ಕಳುಹಿಸಿದ್ದನು: (1) ಸಾಮಾನ್ಯವಾದ ಸಂದೇಶ ಜ್ಞಾನೋಕ್ತಿ 6:16-19: "ನಿರ್ದೋಷಿಯ ರಕ್ತವನ್ನು ಸುರಿಸುವ ಕೈಯನ್ನು" "ಕೇಡು ಮಾಡಲು ತ್ವರೆಪಡುವ ಕಾಲು" ಇವೆರಡನ್ನು ಕರ್ತನು ದ್ವೇಷಿಸುತ್ತಾನೆ; (2) ಮತ್ತು ಎರಡನೇಯ ಸಂದೇಶ, ದೇವರಿಂದ ಅಭಿಷಕ್ತನಾದವನು ಅನ್ಯಾಯವನ್ನು ಮತ್ತು ಮೋಸವನ್ನು ಸಹಿಸುವದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ನಡೆದು ಕೊಂಡವರು ನ್ಯಾಯ ವಾದ ತೀರ್ಪನ್ನು ಅನುಭವಿಸಬೇಕು.

ಅಬ್ನೇರನ ಗವಿಯಲ್ಲಿಯೇ ದಾವೀದನು ಈಷ್ಬೋಶೆತನ ತಲೆಯನ್ನು ಸಮಾಧಿ

ಮಾಡಿದನು. ಸೌಲನ ಕುಟುಂಬದ ಕಥೆಯ ರಾಜ್ಯಭಾರಕ್ಕೆ ಇದು ಅಂತ್ಯದ ನಮನ ವಾಗಿತ್ತು.

ಬೇಸ್‌ಬಾಲ್ ಆಟಗಾರನಾದ ಯೋಗಿ ಬೆರ್ರಾ ಹೇಳಿದಂತೆ, "ಇದು ಮುಗಿಯುವ ವರೆಗೆ ಮುಗಿಯಲಾರದು" - ಪ್ರತಿಯೊಬ್ಬ ನಾಯಕನು ಈ ಮಾತನ್ನು ಒಪ್ಪಿಕೊಳ್ಳುತ್ತಾರೆ. ಒಂದು ದುರ್ಘಟನೆಯನ್ನು ಹಿಂದಿನಾ ಬಾಗಿಲಿನಿಂದ ಹೊರ ಹಟ್ಟುವಾಗ ಇನ್ನೊಂದು ದೊಡ್ಡ ದುರ್ಘಟನೆಯು ಮುಂದಿನ ಬಾಗಿಲನ್ನು ತಟ್ಟುತ್ತಾ ನಿಮ್ಮನ್ನು ವಂದಿಸುತ್ತದೆ. ಮರ್ಫಿಯ ಬಹಳ ಪರಿಚಯವಿರುವ ನಿಯಮದಂತೆ "ತಪ್ಪಾದಂಥದ್ದು ತಪ್ಪಾಗಿಯೇ ಮುಂದುವರಿಯುತ್ತದೆ" ನಾಯಕರುಗಳಿಗೆ "ಮರ್ಫಿಯ ವಿಶೇಷ ನಿಯಮವೇನೆಂದರೆ" "ತಪ್ಪಾಗುತ್ತಾ ಇರುವಂಥದ್ದು ಸಾವಿರಪಟ್ಟು ತಪ್ಪಾಗಿಯೇ ಮುಂದುವರಿಯುತ್ತದೆ."

ನಿಜವಾದ ನಾಯಕರು ಸಕಾರಾತ್ಮಕವಾಗಿ ಯೋಚಿಸುತ್ತಾರೆ, ಅವರು ಅಂತಿಮ ಪರಿಣಾಮದ ಬಗ್ಗೆ ಸ್ಥಿರಚಿತ್ತರಾಗಿರುತ್ತಾರೆ. ಮುಖ್ಯವಾಗಿ ದೇವರನ್ನು ಸತ್ಯವಾಗಿ ಅರಿತಂಥ ನಾಯಕರುಗಳ ಜೀವಿತದಲ್ಲಿ ಇದು ಸತ್ಯವಾಗಿರುತ್ತದೆ.[40]

ದಾವೀದನು ಸಮುವೇಲನ ಮೂಲಕ ಅಭಿಷೇಕ ಹೊಂದಿದ ಮೇಲೆ ಇಪ್ಪತ್ತು ವರ್ಷಗಳ ಕಾಲ ಸಮಸ್ಯೆಗಳ ಮೇಲೆ ಸಮಸ್ಯೆಗಳನ್ನು ಎದುರಿಸಿದನು! ಆದಾಗ್ಯೂ ದಾವೀದನು ಹಿಂಜರಿದು ಹೋಗಲಿಲ್ಲ. ಹೇಗೂ ದೇವರು ಇಂಥ ಯಥಾರ್ಥರಿಗೆ ಪ್ರತಿಫಲವನ್ನು ನೀಡುತ್ತಾನೆ. ಇದನ್ನು ನಾವು ಮೊದಲನೇ ಭಾಗ ಅಧ್ಯಾಯ 5ರಲ್ಲಿ ನೋಡುತ್ತೇವೆ.

> ಅನಂತರ ಇಸ್ರಾಯೇಲ್ಯರೆಲ್ಲರೂ ಹೆಬ್ರೋನಿನಲ್ಲಿದ್ದ ದಾವೀದನ ಬಳಿಗೆ ಬಂದು ಕೂಡಿ ಅವನಿಗೆ - ನಾವು ನಿನ್ನ ರಕ್ತಸಂಬಂಧಿಗಳಾಗಿದ್ದೇವೆ; ಹಿಂದಿನ ದಿವಸಗಳಲ್ಲಿ ಅಂದರೆ ಸೌಲನ ಆಳಿಕೆಯಲ್ಲಿ ಇಸ್ರಾಯೇಲ್ಯರ ದಳಪತಿಯಾಗಿ ಹೋಗುತ್ತಾ ಬರುತ್ತಾ ಇದ್ದವನು ನೀನೇ. ನಿನ್ನನ್ನು ಕುರಿತು ನಿನ್ನ ದೇವರಾದ ಯೆಹೋವನು - ನೀನು ನನ್ನ ಪ್ರಜೆಗಳಾದ ಇಸ್ರಾಯೇಲ್ಯರ ನಾಯಕನೂ ಪಾಲಕನೂ ಆಗಿರುವಿ ಎಂದು ಹೇಳಿದ್ದಾನಷ್ಟೆ ಅಂದರು. ಆಗ ಅರಸನಾದ ದಾವೀದನು ತನ್ನ ಹತ್ತಿರ ಹೆಬ್ರೋನಿಗೆ ಬಂದಿದ್ದ ಇಸ್ರಾಯೇಲ್ಯರ ಹಿರಿಯರೆಲ್ಲರೊಡನೆ ಅಲ್ಲೇ ಯೆಹೋವನ ಸನ್ನಿಧಿಯಲ್ಲಿ ಒಡಂಬಡಿಕೆ ಮಾಡಿಕೊಂಡನು. ಅವರು ಸಮುವೇಲನಿಗೆ ಯೆಹೋವನಿಂದಾದ ಆಜ್ಞೆಗನುಸಾರವಾಗಿ ದಾವೀದನನ್ನು ಅಭಿಷೇಕಿಸಿ ಇಸ್ರಾಯೇಲ್ಯರ ಅರಸನನ್ನಾಗಿ ಮಾಡಿದರು[41] (1 ಪೂರ್ವಕಾಲವೃತ್ತಾಂತ 11:1-3).

ಹಿರಿಯರೆಲ್ಲರೂ ಅವನ ಬಳಿಗೆ ಬಂದಾಗ, ಅವರ ಜೊತೆಯಲ್ಲಿ ಉತ್ತರದ ಕುಲಗಳಿಂದ ಸೈನಿಕರು ಸಹ ಬಂದರು ಎಂದು ಪೂರ್ವಕಾಲವೃತ್ತಾಂತದ ಬರಹಗಾರನು ತಿಳಿಸುತ್ತಾನೆ. ದೇವರ ವಾಕ್ಯದ ಮೇರೆಗೆ "ಸೌಲನ ರಾಜ್ಯವನ್ನು ದಾವೀದನಿಗೆ ನೀಡುವ ಕಾರಣದಿಂದ ಅವರು ಬಂದಿದ್ದರು" (12:23). "ದಾವೀದನನ್ನು ಇಸ್ರಾಯೇಲ್ಯರೆಲ್ಲರ ಅರಸನನ್ನಾಗಿ ಮಾಡಲೇ ಬೇಕು ಎಂಬ ದೃಢಸಂಕಲ್ಪದಿಂದ ಬಂದಿದ್ದರು" (ವಚನ 38; NIV). ಅಲ್ಲಿ ಬಂದವರಲ್ಲಿ 340,000![42] ಸಾವಿರ ಯುದ್ಧ ಭಟರಿದ್ದರು, ಮೂರು ದಿನದ ಮಹಾ ಜಾತಣಕ್ಕಾಗಿ ಸಕಲ ಸಿದ್ಧತೆಗಳಿಂದ ಬಂದಿದ್ದರು ಅದು ಆ ಕಾಲದಲ್ಲಿ ಜರುಗಿದ ಅತಿ ದೊಡ್ಡ ಜಾತಣ ಕೂಟವಾಗಿತ್ತು ಅಲ್ಲಿ "ಇಸ್ರಾಯೇಲ್ಯರೊಳಗೆ ಮಹಾ ಸಂತೋಷವಿತ್ತಷ್ಟೆ" (1 ಪೂರ್ವಕಾಲವೃತ್ತಾಂತ 12:40).

ಅಂತಿಮವಾಗಿ ದಾವೀದನು ತನ್ನ ಜೀವನದ ಕಾರ್ಯಗಳನ್ನು ಪ್ರಾರಂಭಿಸಲು ಸಿದ್ಧವಾಗಿದ್ದನು. ಈ ಕಾರ್ಯಕ್ಕಾಗಿ ಮೂವತ್ತೇಳು ವರ್ಷಗಳಿಂದ ಅನುಭವ ಪಡೆದಿದ್ದನು!

> ದಾವೀದನು ಮೂವತ್ತು ವರುಷದವನಾದಾಗ ಅರಸನಾಗಿ ನಾಲ್ವತ್ತು ವರುಷ ಆಳಿದನು. ಅವನು ಹೆಬ್ರೋನಿನಲ್ಲಿದ್ದುಕೊಂಡು ಯೆಹೂದಕುಲವೊಂದನ್ನೇ ಆಳಿದ್ದು ಏಳು

ವರುಷವೂ ಆರು ತಿಂಗಳೂ; ಯೆರೂಸಲೇಮಿನಲ್ಲಿದ್ದು ಕೊಂಡು ಯೆಹೊದ್ಯರನ್ನೂ ಎಲ್ಲಾ ಇಸ್ರಾಯೇಲ್ಯರನ್ನೂ ಆಳಿದ್ದು ಮೂವತ್ತು ಮೂರು ವರುಷ (2 ಸಮುವೇಲ 5:4, 5).

## ವಿವೇಕಿಗಳಾದ ನಾಯಕರುಗಳು ತಮಗೆ ಸ್ಥಾನ ಮಾನದ ಹೊರತು ಜವಾಬ್ದಾರಿಯು ಇರುತ್ತದೆ ಎಂದು ತಿಳಿದುಕೊಂಡಿರುತ್ತಾರೆ (2 ಸಮುವೇಲ 5:6-10; 1 ಪೂರ್ವಕಾಲವೃತ್ತಾಂತ 11:4-9)

ಒಂದು ವೇಳೆ ಇದು ಕಥೆಯಾಗಿದ್ದರೆ ಅಂದಿನಿಂದ ಅವರು ಸಂತೋಷವಾಗಿದ್ದರು ಎಂದು ಹೇಳವ ಸಮಯ ಇದಾಗಿದೆ: "ಆದರೆ ಇದು ಊಹೆಯಿಂದ ಉಂಟಾದ ಕಥೆಯಲ್ಲ." ಇದು ನಿಜವಾದ ಜೀವನ, ನಿಜವಾದ ಜೀವನ ಇಷ್ಟು ಅಚ್ಚುಕಟ್ಟಾಗಿರುವದಿಲ್ಲ; ಹನ್ನೆರಡು ಕುಲದವರೆಲ್ಲಾರು ಸೇರಿ ದಾವೀದನನ್ನು ಅರಸನನ್ನಾಗಿ ನೇಮಿಸಿಕೊಂಡ ನಂತರ ಅವನು ಹೊಸ ಸಮಸ್ಯೆಗಳನ್ನು ಎದುರಿಸಬೇಕಾಯಿತು, ಪ್ರತಿಸಲ ಗುರಿಯನ್ನು ಮುಟ್ಟಿದಾಗ ಸಮಸ್ಯೆಗಳು ಎದುರಾಗುತ್ತವೆ.

ದಾವೀದನ ಮೊದಲ ಆದ್ಯತೆ ಪಡಕೊಂಡಿದ್ದ ಐಕ್ಯತೆಯನ್ನು ಸ್ಥಿರಪಡಿಸುವಂಥದ್ದು ಹೊಸದಾಗಿ ಹುಟ್ಟಿದ ಐಕ್ಯತೆಯು ನವಜಾತ ಶಿಶುವಿನಂತೆ ಎಲ್ಲಾ ಅಪಾಯಗಳನ್ನು ಎದುರಿಸಬೇಕಾಯಿತ್ತು. ಯಾವಾಗಲು ಮರಣಕ್ಕೆ ಹತ್ತಿರವಿರುತ್ತಿತ್ತು. ದಾವೀದನು ತನ್ನ ಊಹೆಗೂ ನಿಲುಕಲಾರದ, ಧೈರ್ಯದ ಹಾಗೂ ವಿವೇಕವುಳ್ಳ ಯೋಚನೆಯೊಂದನ್ನು ಮಾಡಿದನು. ಅದೇನೆಂದರೆ ಯೆರೂಸಲೇಮನ್ನು ಗೆದ್ದುಕೊಂಡು ಅದನ್ನು ರಾಜವೈಭವದ ಪಟ್ಟಣವನ್ನಾಗಿಯು ರಾಷ್ಟ್ರದ ರಾಜಧಾನಿಯನ್ನಾಗಿಯು, ಇಸ್ರಾಯೇಲ್ಯರ ಆತ್ಮೀಕ ಕೇಂದ್ರವನ್ನಾಗಿ ಮಾಡುವುದೇ.

ಯೆರೂಸಲೇಮು ಪುರಾತನ ಪಟ್ಟಣವಾಗಿತ್ತು. ಆ ಕ್ಷೇತ್ರದ ಉನ್ನತ ಸ್ಥಾನದಲ್ಲಿ ಕಟ್ಟಲ್ಪಟ್ಟಿತು. ಅಬ್ರಹಾಮ್‌ನ ದಿವಸದಲ್ಲಿ ಅದು ರಾಜವೈಭವದ ಪಟ್ಟಣವಾಗಿತ್ತು ಮತ್ತು ಮೆಲ್ಕಿಜಿದೆಕನು ಅದರ ಅರಸನಾಗಿದ್ದನು.[43] ಯೆರೂಸಲೇಮಿನ ಸಮೀಪವಿದ್ದಂಥ ಮೊರೆಯೂ ಪರ್ವತದಲ್ಲಿ ಅಬ್ರಹಾಮ್‌ನು ತನ್ನ ಮಗನಾದ ಇಸಾಕನನ್ನು ಅರ್ಪಿಸಲು ಹೋಗಿದ್ದನು. ಯೆಹೋಶುವನು ಈ ದೇಶಕ್ಕೆ ಬಂದು, ಯೆರೂಸಲೇಮಿನ ಅರಸನನ್ನು ಸಂಹರಿಸಿದ್ದನು.[44] ಆದರೆ ಅದನ್ನು ವಶಪಡಿಸಿಕೊಳ್ಳಲಿಲ್ಲ[45] ಬೇರೆಯವರು ಅದನ್ನು ಅನೇಕ ವರ್ಷಗಳಿಂದ ವಶಪಡಿಸಿಕೊಳ್ಳಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ.[46] ಯೆರೂಸಲೇಮು ಮೂರು ಕಡೆಯಿಂದ ಆಳವಾದ ಕಣಿವೆಗಳಿಂದ ಸುತ್ತುವರಿಯಲ್ಪಟ್ಟಿತ್ತು. ನಾನೂರು ವರ್ಷಗಳ ಕಾಲ ಇಸ್ರೇಲಿನ ಮದ್ಯಭಾಗದಲ್ಲಿ ದಾಳಿಗೆ ಬಗ್ಗದ ದೃಢವಾದ ಕೋಟೆಯಾಗಿತ್ತು. ಯೆರೂಸಲೇಮನ್ನು ವಶಪಡಿಸಿಕೊಳ್ಳುವ ಮೂಲಕವಾಗಿ ದಾವೀದನು ಐಕ್ಯತೆಯ ಶಕ್ತಿಯನ್ನು ಪ್ರದರ್ಶಿಸಿದನು, ಏಕಾಂಗಿಯಾಗಿ ಯಾರೂ ಮಾಡದ ಸಾಧನೆಯನ್ನು ಇಸ್ರಾಯೇಲ್ ಒಗ್ಗಟ್ಟಿನಿಂದ ಸಾಧಿಸಿತ್ತು. ಮತ್ತು ಯೆರೂಸಲೇಮು ಯೂದಾಕುಲಕ್ಕು ಬೆನ್ಯಾಮಿನನ ಕುಲಕ್ಕು ಮದ್ಯದಲ್ಲಿ ತಟಸ್ಥ ಪ್ರದೇಶವಾಗಿದ್ದಲಿಂದ, ದಾವೀದನು ತನ್ನ ಆಡಳಿತದಲ್ಲಿ ಪಕ್ಷಪಾತಿಯಾಗಿರಲಿಲ್ಲ.

ಯೆರೂಸಲೇಮನ್ನು ವಶಪಡಿಸಿಕೊಳ್ಳುವಂಥ ಕಾರ್ಯವನ್ನು ಮಾಡುವದಕ್ಕಿಂತಲೂ ಹೇಳುವದು ಸರಳವಾಗಿದೆ. ದಾವೀದನೂ ಅವನ ಜನರು ಯೆರೂಸಲೇಮನ್ನು ವಶಪಡಿಸಿಕೊಳ್ಳಲು ಹೊರಟಾಗ, ಪಟ್ಟಣದ ಕೋಟೆಯನ್ನು ಆವರಿಸಿಕೊಂಡಿದ್ದ ಯಬೂಸಿಯರು[47] ಅವಮಾನದ ಮಾತುಗಳಿಂದ "ನೀನು ಎಂದಿಗೂ ಇದರಲ್ಲಿ ಪ್ರವೇಶ ಮಾಡಲು ಸಾಧ್ಯವಿಲ್ಲ" ಎಂದು ಕೂಗಿದರು. ನಮ್ಮಲ್ಲಿರುವ "ಕುರುಡರು ಮತ್ತು ಕುಂಟರು ನೀನು ಬಳಿಬಾರದಂತೆ ತಡೆಯುತ್ತಾರೆ!"[48] ಹೇಗೂ ದಾವೀದನಿಗೆ ಪಟ್ಟಣದ ರಕ್ಷಣೆಯ ವಿಷಯವಾದ ಬಲಹೀನ ಸಂಗತಿ ತಿಳಿದಿತ್ತು. ಅದೇನೆಂದರೆ ಗೋಡೆಯ ಹೊರಗಡೆಯಲ್ಲಿದ್ದ ನೀರಿನ ಓರತೆಯಿಂದ ಕೋಟೆಯ ಹೃದಯ ಭಾಗದಲ್ಲಿದ್ದ ಬಾವಿಗೆ ಒಂದು ಸಂಪರ್ಕ ಕಲ್ಪಿಸುವ ಸುರಂಗ ಮಾರ್ಗವಿತ್ತು. ಸುರಂಗ ಮಾರ್ಗವಾಗಿ ನುಸುಳಿ ಬಂದು ಆಳವಾದ ಬಾವಿಯನ್ನು ಹತ್ತುವುದು ಆತ್ಮ ಹತ್ಯದಂತ ಸಾಧನೆಯಾಗಿತ್ತು.

ಆಗ ದಾವೀದನು; "ಯಾಬೂಸಿಯರನ್ನು ಯಾವನು ಮೊದಲು ಸೋಲಿಸುವನೋ ಅವನು ಪ್ರಮುಖನೂ ದಳಪತಿಯೂ ಆಗುವನು ಅಂದನು" (1 ಪೂರ್ವಕಾಲವೃತ್ತಾಂತ 11:6). ಆಗ ಯೋವಾಬನು ತಡ ಮಾಡದೆ ತಣ್ಣಗಿರುವ ನೀರಿನೊಳಗೆ ಇಳಿದು ಕತ್ತಾಲಾದ ಸುರಂಗ ಮಾರ್ಗದ ಅಂತ್ಯಕ್ಕೆ ಅವನು ಅವನ ಜನರು ಸೇರಿದರು. ಮತ್ತು ಯೆರೂಸಲೇಮು ದಾವೀದನ ಕೈವಶವಾಯಿತು - ದಾವೀದನ ಧೈರ್ಯ ಹಾಗೂ ಪೇಚಾಟಕ್ಕೆ ಒಳಮಾಡಿದ ಯುದ್ಧ ವೀರನಾದ ಯೋವಾಬನು ಪುನ ದಾವೀದನ ಸೈನ್ಯಾಧಿಪತಿಯಾದನು. (ಇಂದು ಯೋವಾಬ ಲಿಂದ ಬಿಡಿಸಿಕೊಳ್ಳುವದು ಕಷ್ಟಕರವಾದದ್ದೆ!)

ತಕ್ಷಣವೇ ದಾವೀದನು ಯೆರೂಸಲೇಮನ್ನು ತನ್ನ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡನು ಮತ್ತು ಅದರ ಮೇರೆಗಳನ್ನು ಅಭಿವೃದ್ಧಿ ಪಡಿಸಿದನು.[49] ಬೇಗನೇ ಅದು "ದಾವೀದ ನಗರವಾಯಿತು." ದಿನಗಳು ಕಳೆದಂತೆ, "ಸೇನಾಧೀಶ್ವರನಾದ ಯೆಹೋವ ದೇವರು ಅವನ ಸಂಗಡ ಇದ್ದದರಿಂದ ಅವನು ಅಭಿವೃದ್ಧಿ ಹೊಂದುತ್ತಾ ಹೋದನು" (2 ಸಮುವೇಲ 5:10).

2 ಸಮುವೇಲ 5:11ರಲ್ಲಿ ಇರುವ ಟಿಪ್ಪಣಿ ದಾವೀದನ ಯಶಸ್ಸಿನ ಬಗ್ಗೆ ಒತ್ತಿ ಹೇಳಲಾಗಿದೆ: "ತೂರಿನ ಅರಸನಾದ ಹೀರಾಮನು ದಾವೀದನಿಗೆ ದೂತರನ್ನೂ ದೇವದಾರು ಮರಗಳನ್ನೂ ಬಡಗಿಯವರನ್ನೂ ಶಿಲ್ಪಿಗಳನ್ನೂ ಕಳುಹಿಸಲು ಅವರು ಇವನಿಗೋಸ್ಕರ ಅರಮನೆಯನ್ನು ಕಟ್ಟಿದರು (ಮನೆ)." ತೂರ್ ಪಟ್ಟಣವು ಪ್ರಾಮುಖ್ಯವಾದ ಸಮುದ್ರ ನಿಲ್ದಾಣವಾಗಿತ್ತು. ಆ ಪಟ್ಟಣವು ಇಸ್ರಾಯೇಲಿನ ಉತ್ತರ ಭಾಗದ ಫೊಮಿನಿಕೆಯಲ್ಲಿತ್ತು. ಹೀರಾಮನ ಬಹುಮಾನಗಳು ನೆನಪಿನಲ್ಲಿಡುವಂಥದ್ದು ಯಾಕೆಂದರೆ ಅವರು ದಾವೀದನ ಸ್ಥಾನಮಾನವನ್ನು ಒಪ್ಪಿಕೊಂಡ ವಿದೇಶಿಯರಲ್ಲಿ ಮೊದಲಿಗರಾಗಿದ್ದರು.

ಹೀರಾಮನ ಔದಾರ್ಯ ದಾವೀದನನ್ನು ಸಂತೋಷಪಡಿಸಿತ್ತು: "ಇದಲಿಂದ ದಾವೀದನು - ಕರ್ತನು ನನ್ನನ್ನು ಇಸ್ರಾಯೇಲ್ ರಾಜನನ್ನಾಗಿ ಸ್ಥಿರಪಡಿಸಿ ತನ್ನ ಪ್ರಜೆಗಳಾದ ಇಸ್ರಾಯೇಲ್‌ರ ನಿಮಿತ್ತವಾಗಿ ನನ್ನ ರಾಜ್ಯವನ್ನು ವೃದ್ಧಿಪಡಿಸಿದನೆಂದು ತಿಳಿದು ಕೊಂಡನು" (2 ಸಮುವೇಲ 5:12). ನಮ್ಮಲ್ಲಿ ವಿಶೇಷವು ನಡೆದಾಗ "ಇದು ಸತ್ಯವೋ? ಎಂದು ಆಶ್ಚರ್ಯವಾಗಿದೆಯೋ ಅಥವಾ ನಾವು ಎಚ್ಚರಗೊಂಡು ಇದು ಸತ್ಯವಲ್ಲ ಎಂದು ತಿಳಿಯುತ್ತೆವೋ?" ದಾವೀದನು ಈ ರೀತಿಯ ಆಶ್ಚರ್ಯ ಸ್ಥಿತಿಯಲ್ಲಿರುವಾಗ ಹೀರಾಮನ ಕಾರ್ಯವು ದೇವರ ವಾಗ್ದಾನವು ನೆರವೇರಿತು ಎಂದು ಸಿದ್ಧಾಂತಪಡಿಸಿತು.

ಹೀರಾಮನ ಒಳ್ಳೆಯ ಕಾರ್ಯವು ದಾವೀದನಿಗೆ ಒಂದು ಪ್ರಾಮುಖ್ಯವಾದ ಸತ್ಯಾಂಶವನ್ನು ತಂದಿತು. "ದೇವರು ಇಸ್ರಾಯೇಲ್ಯರ ನಿಮಿತ್ತವಾಗಿ ತನ್ನ ರಾಜ್ಯವನ್ನು ಉನ್ನತ ಸ್ಥಿತಿಗೆ ತಂದನು ಎಂದು ಗ್ರಹಿಸಿದನು." ದಾವೀದನಿಗಾಗಿ ಎಂಬುದಾಗಿ ಇಲ್ಲ, "ತನ್ನ ಇಸ್ರಾಯೇಲ್ ಜನರ ನಿಮಿತ್ತವಾಗಿ" ಎಂದು ಗಮನಿಸಿ ಅನೇಕರು ತಿಳಿದಿದ್ದಾರೆ. ನಾಯಕತ್ವದ ಉದ್ದೇಶ ಅವರ ಚಿತ್ತವನ್ನು ಅಭ್ಯಸಿಸುವದಕ್ಕೆ ಅವರ ಆಶೆಗಳನ್ನು ಈಡೇರಿಸಿ ಕೊಳ್ಳುವದಕ್ಕೆ ಅವರ ಇಷ್ಟದಂತೆ ಕಾರ್ಯಗಳನ್ನು ನಿರ್ಮಿಸಿಕೊಳ್ಳುವದಕ್ಕೆ ಎಂಬುದಾಗಿ ಯೋಚಿಸಿದ್ದರು. ಆದರೆ ದಾವೀದನು ವ್ಯಯಕ್ತಿರವಾದ ಕಾರ್ಯಪಟ್ಟಿಯನ್ನು ಹೊಂದದೆ ದೈವಿಕ ಕಾರ್ಯಪಟ್ಟಿಯನ್ನು ಹೊಂದಿದ್ದನು. ದೇವಜನರಿಗೋಸ್ಕರವೇ ಎಲ್ಲವನ್ನು ಮಾಡಿದನು.

ನಾಯಕತ್ವ ಅನ್ನುವದು ಒಂದು ಸ್ಥಾನವಲ್ಲ, ಅದು ಜವಾಬ್ದಾರಿಯಾಗಿದೆ. ದಾವೀದನು ಹೊಂದಿದ್ದ ಜವಾಬ್ದಾರಿಯನ್ನು ಅರಿಯಲು ಕಷ್ಟವಾಗುತ್ತದೆ. ಅಂತಹ ಜವಾಬ್ದಾರಿಗೆ ಹೋಲಿಸಲು ಈ ದಿನ ನಮ್ಮಲ್ಲಿ ಏನು ಉಳಿದಿರುವದಿಲ್ಲ, ದಾವೀದನು ಜನರ ಕೇವಲ ಆರ್ಥಿಕ ಹಾಗೂ ರಾಜಕೀಯದ ಕ್ಷೇಮಾಭಿವೃದ್ಧಿಯನ್ನು ಮಾತ್ರ ಯೋಚಿಸಿದೆ, ಜನರ ಆತ್ಮೀಕ ವಿಷಯಗಳ ಬಗ್ಗೆಯೂ ಚಿಂತಿಸಿದನು, ಒಬ್ಬ ರಾಷ್ಟ್ರಪತಿಯ ಜವಾಬ್ದಾರಿಯನ್ನು ಯೋಚಿಸಿ? ಕರ್ತನ ಸಭೆಯಲ್ಲಿ ಹೆಚ್ಚು ಜವಾಬ್ದಾರಿ ಹೊತ್ತಿರುವ ಹಿರಿಯನ ಬಗ್ಗೆ ಯೋಚಿಸಿ.[50] ರಾಷ್ಟ್ರಪತಿಯ

ಕೆಲಸವನ್ನು ಹತ್ತು ಲಕ್ಷ ಸಭಿಕರನ್ನು ಹೊಂದಿರುವ ಸಭಾನಾಯಕನ ಜವಾಬ್ದಾರಿಗೆ ಸೇರಿಸಿ ಯೋಚಿಸುವಾಗ, ದಾವೀದನು ಎದುರಿಸಿದ ಸಮಸ್ಯೆಗಳ ಬಗ್ಗೆ ಕೆಲವು ಆಲೋಚನೆ ಗಳು ಸಿಗುತ್ತವೆ.

ಎಲ್ಲಾ ನಾಯಕರುಗಳು ನಾಯಕರ ಸ್ಥಾನಕ್ಕೆ ಬಂದಿರುವದು ಅವರ ಸ್ವಾರ್ಥಕ್ಕಾಗಿ ಅಲ್ಲ, ಆದರೆ ಜನರ ಸೇವೆ ಮಾಡುವದಕ್ಕಾಗಿ, ಜನರ ಆತ್ಮೀಕ ಹಾಗೂ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ ಜವಾಬ್ದಾರಿಯ ಕೆಲಸವು ನಾಯಕತ್ವದ ಪ್ರಥಮ ಆದ್ಯತೆಯಾಗಿರುತ್ತದೆ, ಆದರೆ ಅನೇಕ ನಾಯಕರುಗಳು ಇದನ್ನು ಗ್ರಹಿಸಿರುವದಿಲ್ಲ.

## ವಿವೇಕವುಳ್ಳ ನಾಯಕರುಗಳು ತಮ್ಮನ್ನು ಹಿಂಬಾಲಿಸುವವರ, ಹಿತ ಚಿಂತಕರಾಗಿರುತ್ತಾರೆ (2 ಸಮುವೇಲ 5:17-25; 1 ಪೂರ್ವಕಾಲವೃತ್ತಾಂತ 14:8-16)

ಈ ಹಿಂದೆ ಅಬ್ನೇರನು ಉತ್ತರದ ಕುಲಗಳ ಹಿರಿಯರೊಂದಿಗೆ ಸಮ್ಮೆಳನವನ್ನು ನಡಿಸಿ ಹೇಳಿದ್ದೇನೆಂದರೆ "ಕರ್ತನು ದಾವೀದನ ವಿಷಯವಾಗಿ - ನನ್ನ ಸೇವಕನಾದ ದಾವೀದನ ಮುಖಾಂತರವಾಗಿ ನನ್ನ ಪ್ರಜೆಗಳಾದ ಇಸ್ರಾಯೇಲ್ಯರನ್ನು ಫಿಲಿಷ್ಟಿಯರ ಕೈಗೂ ಬೇರೆ ಎಲ್ಲಾ ಶತ್ರುಗಳ ಕೈಗೂ ತಪ್ಪಿಸುವೆನೆಂದು ನುಡಿದಿದ್ದಾನಲ್ಲಾ ಎಂದು ಹೇಳಿದನು" (2 ಸಮುವೇಲ 3:18).[51] ಬೇಗನೇ ದಾವೀದನು ಈ ವಾಗ್ದಾನದ ಪರೀಕ್ಷೆಗೆ ಒಳಗಾದನು. "ಇಸ್ರಾಯೇಲ್ಯರು ದಾವೀದನನ್ನು ಅಭಿಷೇಕಿಸಿ ತಮ್ಮ ಅರಸನನ್ನಾಗಿ ಮಾಡಿಕೊಂಡರೆಂಬ ವರ್ತಮಾನವು ಫಿಲಿಷ್ಟಿಯರಿಗೆ ಮುಟ್ಟಿದಾಗ ಅವರು ಅವನನ್ನು ಹಿಡಿಯುವದಕ್ಕೆ ಹೊರಟರು" (2 ಸಮುವೇಲ 5:17). ಎಲ್ಲಿಯವರೆಗೂ ದೇಶವು ವಿಭಾಗವಾಗಿತ್ತೋ, ಎಲ್ಲಿಯವರೆಗೂ ದಾವೀದನು ಯೂದಾಯಕ್ಕೆ ಮಾತ್ರ ಅರಸನಾಗಿದ್ದನೋ ಅಲ್ಲಿಯವರೆಗೂ ದಾವೀದನು ಫಿಲಿಷ್ಟಿಯರಿಗೆ ಅಪಾಯಕಾರಿಯಾಗಿರಲಿಲ್ಲ. ಆದರೆ ಇಸ್ರಾಯೇಲ್ ಒಗ್ಗಟ್ಟಾಗಿ, ದಾವೀದನು 300,000 ಲಕ್ಷ ಯುದ್ಧ ಭಟರನ್ನು ಹೊಂದಿದ್ದನೋ. ಆಗ ಫಿಲಿಷ್ಟಿಯರು, ದಾವೀದನು ಯುದ್ಧಕ್ಕೆ ಸಿದ್ಧನಾಗುವ ದರೊಳಗಾಗಿ ಅವನ ಮೇಲೆ ಆಕ್ರಮಣ ಮಾಡಿದರು.

ಈ ಆಕ್ರಮಣ ಕೊಳ್ಳೆಗೋಸ್ಕರವಾಗಿರದೆ ಇದು ಯುದ್ಧವಾಗಿತ್ತು. ಸೌಲನನ್ನು ಕೊಲ್ಲುವುದಕ್ಕೆ ಹೋದಂಥ ಯುದ್ಧದಂತಿತ್ತು ಹೆಚ್ಚು ಗಮನವಿಡಬೇಕಾದ ಸಂಗತಿ "*ಎಲ್ಲಾ* ಫಿಲಿಷ್ಟಿಯರು ದಾವೀದನನ್ನು ಹುಡುಕುವದಕ್ಕೆ ಹೊರಟರು." NIV ಹೀಗೆ ತಿಳಿಸುತ್ತದೆ, "ಯುದ್ಧ ಸನ್ನದ್ಧರಾಗಿ ಅವನನ್ನು ಹುಡುಕುವದಕ್ಕೆ ಅವರು ಹೊರಟರು." ಫಿಲಿಷ್ಟಿಯದಿಂದ ಹೊರಟು, ಸುಲುಕೊಳ್ಳುತ್ತ, ಕೊಲ್ಲುತ್ತಾ,[52] ಯೆರೂಸಲೇಮಿಗೆ ಕೆಲವು ಮೈಲುಗಳು ಹತ್ತಿರವಿರುವ ರೆಫಿಮಿನ ತಗ್ಗಿಗೆ ಬಂದರು.

ತಗ್ಗಿನಲ್ಲಿ ಚದುರಿದ್ದ ವೈರಿಯ ಸೈನ್ಯವನ್ನು ದಾವೀದನು ನೋಡಿ, ಸತ್ಯವಾಗಿ ಇಸ್ರಾಯೇಲ್ಯರ ಮೇಲೆ ಆಡಳಿತ ನಡೆಸುತ್ತಿದ್ದ ಕರ್ತನ ಬಳಿಗೆ ಬಂದು "ನಾನು ಫಿಲಿಷ್ಟಿಯರಿಗೆ ವಿರೋಧವಾಗಿ ಹೋಗಬಹುದೋ?" ಎಂದು ಪ್ರಾರ್ಥಿಸಲು ಕರ್ತನು "ಹೋಗು, ನಾನು ಹೇಗೂ ಅವರನ್ನು ನಿನ್ನ ಕೈಗೆ ಒಪ್ಪಿಸುವೆನು ಎಂದು ಉತ್ತರಕೊಟ್ಟನು" (2 ಸಮುವೇಲ 5:19). ಅನೇಕ ವರ್ಷಗಳ ನಂತರ ಕರ್ತನ ಸೈನ್ಯದಂತಿದ್ದ ಸೈನ್ಯದ ಸಹಾಯದಿಂದ ದಾವೀದನು ಫಿಲಿಷ್ಟಿಯರನ್ನು ಸೋಲಿ ಸಿದನು. ಸಂತೋಷದಿಂದ, "ಕರ್ತನು ಕಟ್ಟೆಯೊಡೆದ ಪ್ರವಾಹದಂತೆ [ಆಕಸ್ಮಿಕವಾದ ಪ್ರವಾಹದ ಒಡೆತ; RSV] ನನ್ನ ಶತ್ರುಗಳ ಮೇಲೆ ಬಿದ್ದು ಅವರನ್ನು ನನ್ನ ಕಣ್ಣಮುಂದೆಯೇ ನಾಶಮಾಡಿದ್ದಾನೆಂದು" (2 ಸಮುವೇಲ 5:20). ಹೇಳಿ ಆ ಯುದ್ಧ ಸ್ಥಳಕ್ಕೆ ಬಾಳ್‌ಪೆರಾಚೀ ಮೆಂದು ಹೆಸರಿಟ್ಟನು. ಇದರ ಅರ್ಥ "ಕಟ್ಟೆಯೊಡೆದ ಪ್ರವಾಹಕ್ಕೆ ಆತನು ಒಡೆಯನು."

ತನ್ನವರನ್ನು ಕಾಪಾಡಿ ಸಂರಕ್ಷಿಸುವದೇ ಒಬ್ಬ ನಾಯಕನ ದೊಡ್ಡ ಜವಾ ಬ್ದಾರಿಯಾಗಿರುತ್ತದೆ. ಕೆಲವು ಸಾರಿ ನಾಶನದ ಆಕ್ರಮಣ ಸ್ಪಷ್ಟವಾಗಿರುತ್ತದೆ; ಕೆಲವು ಸಾರಿ ಸ್ಪಷ್ಟವಾಗಿರುವದಿಲ್ಲ. ಕೆಲವು ಸಾರಿ ಹೊರಗಿನಿಂದ ಬರುತ್ತದೆ. ಕೆಲವು ಸಾರಿ ಒಳಗಿನಿಂದ

ಉದ್ಭವಿಸುತ್ತದೆ.[53] ವಿವೇಕಿಯಾದ ನಾಯಕನು ಅಪಾಯವನ್ನು ಅದರ ಪರಿಣಾಮವನ್ನು ಎದುರಿಸುವದಕ್ಕೆ ಶೀರ್ಘ ಗಾಯಿಯಾಗಿರುತ್ತಾನೆ. ದಾವೀದನಂತ ನಾಯಕನು ಸಂದಿಗ್ಧ ಪರಿಸ್ಥಿತಿಯಲ್ಲಿ ದೇವರ ನಡೆಸುವಿಕೆಗಾಗಿ ದೇವರಿಂದ ಸಹಾಯಕ್ಕಾಗಿ ದೇವರಿಗೆ ಪ್ರಾರ್ಥಿಸುತ್ತಾರೆ.

ಒಂದು ಸಮಸ್ಯೆಯನ್ನು ಅವರು ಎದುರಿಸಿದರು ಅದು ನಿರಂತರವಾಗಿ ಪರಿಹಾರವಾಯಿತು ಎಂದು ವಿವೇಕಿಗಳಾದ ನಾಯಕರುಗಳು ಆಲೋಚಿಸುವದಿಲ್ಲ. ಅದು ಪುನ ಬರುವುದೇ ಇಲ್ಲ ಎಂದು ಪರಿಗ್ರಹಿಸುವದಿಲ್ಲ. ದಾವೀದನ ಮೊದಲ ಜಯದ ಬಗ್ಗೆ ಭ್ರಾಂತಿಗೊಂಡವರಾದ ಫಿಲಿಷ್ಟಿಯರು ಇನ್ನೂ ಹೆಚ್ಚಿನ ಸೈನ್ಯವನ್ನು ರೆಫಾಯಾಮಿನಲ್ಲಿ ಕೂಡಿಸಿಕೊಂಡರು.[54] ಆಗ ಪುನ ದಾವೀದನು ಕರ್ತನ ಸನ್ನಿಧಿಯಲ್ಲಿ ವಿಚಾರಿಸಿದಾಗ ಈ ಸಾರಿ ಫಿಲಿಷ್ಟಿಯರ ಸುತ್ತಲೂ ವ್ಯೂಹ ಕಟ್ಟಿಕೊಂಡು ಕರ್ತನು ಅಪ್ಪಣೆ ಕೊಡುವವರೆಗೆ ಕಾದುಕೊಳ್ಳುವಂತೆ ತಿಳಿಸಿದನು. ಅವರ ಹಿಂದಳವನ್ನು ಸುತ್ತಿಕೊಂಡು ಹೋಗಿ ಬಾಕಾ ಮರಗಳಿರುವ ಕಡೆಯಿಂದ ಅವರ ಮೇಲೆ ಬೀಳು ಅಂದನು. “ಆ ಮರಗಳ ತುದಿಯಲ್ಲಿ ಹೆಜ್ಜೆಗಳ ಸಪ್ಪಳ ಕೇಳಿಸುವಾಗ ಕರ್ತನು ಫಿಲಿಷ್ಟಿಯರ ಸೈನ್ಯವನ್ನು ಸೋಲಿಸುವದಕ್ಕೋಸ್ಕರ ನಿನ್ನ ಮುಂದಾಗಿ ಹೊರಟನೆಂದು ತಿಳಿದುಕೊಂಡು ಅವರ ಮೇಲೆ ಬೀಳು ಅಂದನು” ( 2 ಸಮುವೇಲ 5:24). ಇನ್ನೊಂದು ಸಾರಿ ದಾವೀದನು ದೇವರ ಅಪ್ಪಣೆಯನ್ನು ಪರಿಪಾಲಿಸಿದನು. ಈ ಸಾರಿ ದಾವೀದನೂ ಅವನ ಸೈನ್ಯದವರು ಅವರ ವೈರಿಗಳನ್ನು ಅವರ ದೇಶಕ್ಕೆ ಹಿಂದಟ್ಟಿದರು. “ದಾವೀದನು ಕೀರ್ತಿಯು ಎಲ್ಲಾ ಆಜ್ಞಾನುಸಾರವಾಗಿ ಮಾಡಿದನು; ಇಶ್ರಾಯೇಲ್ಯರು ಫಿಲಿಷ್ಟಿಯರ ಸೈನ್ಯವನ್ನು ಗಿಬ್ಯೋನಿನಿಂದ ಗೆಜೆರಿನವರೆಗೂ ಸಂಹರಿಸಿದನು” (1 ಪೂರ್ವಕಾಲವೃತ್ತಾಂತ 14:16). ದಾವೀದನ ನಿರ್ಣಾಯಕವಾದ ಜಯ ಫಿಲಿಷ್ಟಿಯರ ಹೃದಯಗಳನ್ನು ಭ್ರಾಂತಿಗೊಳಿಸಿತ್ತು. ಫಿಲಿಷ್ಟಿಯರಿಂದ ತೊಂದರೆಗಳು ಉದ್ಭವಿಸುತ್ತಿದ್ದರೂ, ಇಸ್ರಾಯೇಲ್ಯರಿಗೆ ಆ ತೊಂದರೆಗಳು ಗಂಭೀರವಾಗಿರುತ್ತಿರಲಿಲ್ಲ.

ದಾವೀದನ ನೂರಾರು ಯುದ್ಧಗಳಲ್ಲಿ ಈ ಎರಡು ಘರ್ಷಣೆಗಳು (9 ವಚನಗಳು ಮಾತ್ರ), ದಾವೀದನ ಇನ್ನೂ ಎರಡು ಯುದ್ಧಗಳ ಲೆಕ್ಕವನ್ನು ನೀಡುತ್ತದೆ. ಈ ಜಯಗಳ ನಿಮಿತ್ತವಾಗಿ ಅವರು ನೇಮಿಸಿಕೊಂಡ ದಾವೀದನನ್ನು ದೇವರು ಮೆಚ್ಚಿರುವನು ಎಂಬುದಕ್ಕೆ ದೇವರ ಸಂಕಲ್ಪವೇ ಎಂದು ತಿಳಿಕೊಂಡರು ಮತ್ತು ದೇವರು ಅವನ ಆಡಳಿತವನ್ನು ಆಶೀರ್ವದಿಸುವನು ಎಂದು ತಿಳಿಕೊಂಡರು. ಮತ್ತು ಇದು ಚರಿತ್ರೆಯಲ್ಲಿ ಸೇರಿ ಹೋಯಿತು. ಇದಾಗಿ ನೂರಾರು ವರ್ಷಗಳ ನಂತರ, ಯೆಶಾಯನು ದುಷ್ಟರ ಶಿಕ್ಷೆಯ ಬಗ್ಗೆ ಬರೆದರು,

> ಯೆಹೋವನು ಈಗ ಅಪರೂಪವಾದ ತನ್ನ ಕೆಲಸವನ್ನು ನಡಿಸಬೇಕೆಂತಲೂ ಅಪೂರ್ವವಾದ ತನ್ನ ಕಾರ್ಯವನ್ನು ನೆರವೇರಿಸಬೇಕೆಂತಲೂ ಪೆರಾಚೀಮ್ ಬೆಟ್ಟದಲ್ಲಿ ಎದ್ದಂತೆ ಏಳುವನು, ಗಿಬ್ಯೋನ್ ತಗ್ಗಿನಲ್ಲಿ ರೋಷಗೊಂಡಂತೆ ರೋಷಗೊಳ್ಳುವನು (ಯೆಶಾಯ 28:21).

ಮೊದಲನೇ ಪೂರ್ವಕಾಲವೃತ್ತಾಂತ 14:17 ಈ ಜಯದ ಪರಿಣಾಮವನ್ನು ತಿಳಿಸುತ್ತದೆ: “ದಾವೀದನ ಕೀರ್ತಿಯು ಎಲ್ಲಾ ದೇಶಗಳಲ್ಲಿ ಹಬ್ಬಿತು; ಕರ್ತನು ಅವನಿಗೆ ಎಲ್ಲಾ ಜನಾಂಗಗಳೂ ಹೆದರುವಂತೆ ಮಾಡಿದನು.”

ವಿವೇಕಿಗಳಾದ ನಾಯಕರುಗಳು ಪ್ರತಿಯೊಂದು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸುತ್ತಾರೆ. ಯಾಕೆಂದರೆ ನಮ್ಮ ಮುಂದೆ ಬರುವ ಸಮಸ್ಯೆಗಳ ಪರಿಹಾರ ಹೇಗೆ ಇರುತ್ತವೆ ಎಂದು ನಮಗೆ ತಿಳಿದಿರುವದಿಲ್ಲ.

## ವಿವೇಕಿಗಳಾದ ನಾಯಕರುಗಳು ಧಾರಾಳವಾಗಿ ಕೊಂಡಾಡುತ್ತಾರೆ (2 ಸಮುವೇಲ 23:8-39; 1 ಪೂರ್ವಕಾಲವೃತ್ತಾಂತ 11:10-12:38)

ದಾವೀದನು ಫಿಲಿಷ್ಟಿಯರನ್ನು ಏಕಾಂಗಿಯಾಗಿ ಸಂಧಿಸಲಿಲ್ಲ. ದೇವರು ಅವನೊಂದಿಗೆ ಇದ್ದ ಮಾತ್ರಕ್ಕೆ ಯುದ್ಧದಲ್ಲಿ ಜಯಗಳಿಸಲಿಲ್ಲ. ದೇವರು ಅವನಿಗೆ ಸಹಾಯಕರಾಗಿ ಕೆಲವು ಪರಾ ಕ್ರಮಿಗಳನ್ನು ಅವನ ಸುತ್ತಲೂ ಇಟ್ಟಿದ್ದರಿಂದ ಅವನಿಗೆ ಜಯವು ಸಾಧ್ಯವಾಯಿತು. ದಾವೀದನು ಇದನ್ನು ತಿಳಿದವನಾಗಿ ಯಾರಿಗೆ ಗೌರವವೋ ಅವರಿಗೆ ಗೌರವವನ್ನು ನೀಡಿದನು. 2 ಸಮುವೇಲ 23ರಲ್ಲಿಯ ("ದಾವೀದನ ಪರಾ ಕ್ರಮಿಗಳಾದ"[56]) ಪ್ರಸಿದ್ಧ ಶೂರರ ಕುರಿತು 23ನೇ ಅಧ್ಯಾಯದಲ್ಲಿ, ದಾವೀದನ ಆಳ್ವಿಕೆಯ ಅಂತ್ಯವನ್ನು ತೋರಿಸುತ್ತಾ ತಿಳಿಸಲಾಗಿದೆ. 1 ಪೂರ್ವಕಾಲವೃತ್ತಾಂತ, ಅಧ್ಯಾಯ 11 ಮತ್ತು 12ರಲ್ಲಿ ದಾವೀದನ ಆಳ್ವಿಕೆಯ ಆರಂಭದಲ್ಲಿ ಪಟ್ಟಿಮಾಡಿ ತೋರಿಸಲಾಗಿದೆ. ಎರಡು ಸಮುವೇಲ ಇಲ್ಲಿ ಮೂವತ್ತು ಏಳು ಪ್ರಸಿದ್ಧ ಶೂರರು ಎಂದು ಬರೆಯಲ್ಪಟ್ಟಿದೆ. ಈ ಪಟ್ಟಿಯು ಎಲ್ಲಿಂದ ಉದ್ಭವಿಸಿತು? *ಅರಸನಾದ ದಾವೀದನು* ಅವರನ್ನು ಮೆಚ್ಚಿ ಅವರ ಹೆಸರುಗಳ ಪಟ್ಟಿಯನ್ನು ದಾಖಲು ಮಾಡಿಟ್ಟಿದ್ದನು. ಅವರು ಪ್ರಸಿದ್ಧ ಶೂರರ ಕೃತ್ಯಗ ಳನ್ನು ಗೌರವಾನಿತ್ವವಾಗಿ ದಾಖಲಿಸಿಕೊಂಡಿದ್ದನು. ಮುಂದಿನ ಪೀಳಿಗೆಯ ನೆನಪಿನಾರ್ಥ ವಾಗಿ ಇವುಗಳನ್ನು ಬರೆದು ಇಟ್ಟಿದ್ದನು.

ವಿವೇಕಿಗಳಾದ ನಾಯಕರುಗಳು - ಸಭೆಯಲ್ಲಿರಬಹುದು, ಮನೆಯಲ್ಲಿರಬಹುದು, ಅಥವಾ ಸ್ಥಳೀಯ ಸಂಘಗಳಲ್ಲಿರಬಹುದು ಯಾರನ್ನು ಎಲ್ಲಿ ಗುರುತಿಸಬೇಕು ಎಂಬ ವಿಷಯಕ್ಕೆ ಪ್ರಾಮುಖ್ಯತೆಯನ್ನು ನೀಡಿರುತ್ತಾರೆ. ಅರ್ಥವಿಲ್ಲದ ಮೆಚ್ಚುಗೆ ಎಂದು ನಾನು ಹೇಳುತ್ತಿಲ್ಲ (ಇದು ಕೇವಲ ಹೆಸರಿಗೆ ಎಂದು ಜನರಿಗೆ ತಿಳಿಯುತ್ತದೆ); ಅವರು ಮಾಡಿದ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತ ಪಡಿಸುವಂಥದ್ದು. ಪೌಲನು ಹೇಳಿದಾಗೆ, "ಅವರವರಿಗೆ ಸಲ್ಲಿಸತಕ್ಕದ್ದನ್ನು ಸಲ್ಲಿಸಿರಿ; ... ಯಾರಿಗೆ ಮರ್ಯಾದೆಯೋ ಅವರಿಗೆ ಮರ್ಯಾದೆಯನ್ನು ಸಲ್ಲಿಸಿರಿ" (ರೋಮಾಪುರ 13:7). ವಿವೇಕಿಗಳಾದ ನಾಯಕರುಗಳು ಮೆಚ್ಚುಗೆಯನ್ನು ತೋರ್ಪಡಿಸುವದರಲ್ಲಿಯೂ, ಕೊಂಡಾಡುವದರಲ್ಲಿಯೂ ವಿಶಾಲ ಮನೋಭಾವವನ್ನು ಧಾರಾಳವಾಗಿ ತೋರಿಸುತ್ತಾರೆ. ವಿವೇಕಿಗಳಾದ ನಾಯಕರುಗಳು ಮೊದಲು ದೇವರಿಗೂ ನಂತರ ಅವರೊಂದಿಗೆ ಕಷ್ಟಪಟ್ಟು ಕೆಲಸ ಮಾಡಿದವರಿಗೂ ಗೌರವವನ್ನು ನೀಡುತ್ತಾರೆ. "ಮಾನ ಮರ್ಯಾದೆಯನ್ನು ತೋರಿಸು ವದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದಾಗಿರಿ" (ರೋಮಾಪುರ 12:10).

## ವಿವೇಕಿಗಳಾದ ನಾಯಕರುಗಳು ತಮ್ಮ ಕುಟುಂಬದ ಪ್ರಾಮುಖ್ಯತೆಯನ್ನುಹಗುರವಾಗಿ ಪರಿಗಣಿಸುವದಿಲ್ಲ (2 ಸಮುವೇಲ 3:2-5, 12-16; 5:13-16; 1 ಪೂರ್ವಕಾಲವೃತ್ತಾಂತ 14:3-7)

ಈ ಪಠ್ಯ ಕ್ರಮದಲ್ಲಿ ಉಲ್ಲೇಖಿಸುರಿವ ದಾವೀದನ ಕುಟುಂಬದ ಬಗ್ಗೆ ಉದಾಸೀನ ಮಾಡುವುದು ಬೇಡ. 2 ಸಮುವೇಲ 2:2 ದಾವೀದನು ತನ್ನ ಕುಟುಂಬವನ್ನು ಕರೆದು ಕೊಂಡು ಹೆಬ್ರೋನಿಗೆ ಹೋದನು ಎಂದು ನಮಗೆ ತಿಳಿಸಲ್ಪಟ್ಟಿದೆ. 2 ಸಮುವೇಲ 3:1-5ರಲ್ಲಿ, "ದಾವೀದನು ಬಲಗೊಳ್ಳುತ್ತಾ ಬಂದನು" ಎಂದು ನಾವು ತಿಳಿದ ಮೇಲೆ, "ಹೆಬ್ರೋನಿನಲ್ಲಿ[57] ದಾವೀದನಿಗೆ ಗಂಡು ಮಕ್ಕಳು ಹುಟ್ಟಿದರು" ಎಂದು ರುಜುವಾತು ಪಡಿಸಿದ್ದಾರೆ. ದಾವೀದನು ಯೆರೂಸಲೇಮನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಾಗ, ಅಲ್ಲಿಗೆ ನೆಲಸಲು ಹೋದಾಗ, ಆತನ ವಂಶಾವಳಿಯ ವಿವರವನ್ನು ನಮಗೆ ನೀಡಲಾಗಿದೆ. "ಇನ್ನೂ ಕೆಲವು ಮಂದಿ ಗಂಡ ಹೆಣ್ಣು ಮಕ್ಕಳು ಹುಟ್ಟಿದರು" (ಹೋಲಿಸು 2 ಸಮುವೇಲ 5:13; 1 ಪೂರ್ವಕಾಲವೃತ್ತಾಂತ 14:3 ನೋಡಿರಿ).[58] ಯಥಾರ್ಥವಾಗಿ, ಪ್ರೇರಿತನಾದ ಬರಹಗಾರನು, ದಾವೀದನ ಕುಟುಂಬದ ಪ್ರಾಮುಖ್ಯತೆಯನ್ನು ದಾಖಲಿಸಿದ್ದಾನೆ.

ಕುಟುಂಬಗಳು ನಾಯಕರುಗಳನ್ನು ನಿರ್ಮಿಸುತ್ತವೆ ಅಥವಾ ಮುರಿದು ಹಾಕುತ್ತವೆ. ದಾವೀದನು ರಾಜನ ಸ್ಥಾನದಲ್ಲಿ ಹೆಚ್ಚು ಜವಾಬ್ದಾರಿಯುಳ್ಳವನಾದಾಗ, ತನ್ನ ಕುಟುಂಬವನ್ನು ಅಲಕ್ಷ್ಯ ಮಾಡುವದನ್ನು ನಾವು ಮುಂದೆ ನೋಡುತ್ತೇವೆ[59] - ಅದಕ್ಕೆ ತಕ್ಕ ಪ್ರತಿಫಲವನ್ನು ಹೊಂದಿದನು. ನಾಯಕರುಗಳು ತಮ್ಮ ಆಧ್ಯತೆಗಳಿಗೆ ಪ್ರಾತಿನಿದ್ಯ ನೀಡುವಾಗ, ತಮ್ಮ ಕುಟುಂಬಗಳನ್ನು ತತ್ಸಾರ ಮಾಡಬಾರದು.[60]

## ವಿವೇಕಿಗಳಾದ ನಾಯಕರುಗಳು ತಮ್ಮನ್ನು ಹಿಂಬಾಲಿಸುವವರನ್ನು ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾರೆ (2 ಸಮುವೇಲ 6:1, 2; 1 ಪೂರ್ವಕಾಲವೃತ್ತಾಂತ 13:1-4)

ನಮ್ಮ ಮುಂದಿನ ಅಧ್ಯಯನ ದಾವೀದನು ದೇವರ ಮಂಜೂಷವನ್ನು ಯೆರೂಸಲೇಮಿಗೆ ವಿಷಯಗಳನ್ನು ತರಲು ಮಾಡಿದ ಪ್ರಯತ್ನದ ಕುರಿತಾಗಿರುತ್ತದೆ. ಆ ಕಾರ್ಯದಲ್ಲಿ ಇನ್ನೂ ಎರಡು ನಾಯಕತ್ವದ ಬಗ್ಗೆ ಗಮನಿಸಬಹುದು. ವಿವೇಕ ಪೂರ್ವಕವಾಗಿ ದಾವೀದನು ಹೇಗೆ ಈ ವಿಷಯವನ್ನು ಜನರಿಗೆ ಪರಿಚಯಿಸಿದನು ಎಂದು ಪೂರ್ವಕಾಲವೃತ್ತಾಂತದ ಬರವಣಿಗೆಗಾರನು ಬರೆದಿದ್ದಾನೆ:

> ದಾವೀದನು ಸಹಸ್ರಾಧಿಪತಿ ಶತಾಧಿಪತಿ ಮೊದಲಾದ ಸರ್ವಪ್ರಭುಗಳೊಡನೆ ಮಾತಾಡಿದನಂತರ ಇಸ್ರಾಯಲ್ ಸಮಸ್ತ ಸಮೂಹದವರಿಗೆ - ನಿಮ್ಮ ಸಮ್ಮತಿಯೂ ನಮ್ಮ ದೇವರಾದ ಯೆಹೋವನ ಚಿತ್ತವೂ ಇರುವದಾದರೆ ನಾವು ಎಲ್ಲಾ ಇಸ್ರಾಯೇಲ್ ಪ್ರಾಂತಗಳಲ್ಲಿರುವ ನಮ್ಮ ಸಹೋದರರನ್ನೂ ಗೋಮಾಳ ಸಹಿತವಾದ ತಮ್ಮ ಪಟ್ಟಣಗಳಲ್ಲಿರುವ ಯಾಜಕ ಲೇವಿಯರನ್ನೂ ಶೀಘ್ರವಾಗಿ ಕರೇಕಳುಹಿಸೋಣ. ಅವರು ನಮ್ಮ ಬಳಿಗೆ ಕೂಡಿ ಬಂದ ಮೇಲೆ ನಾವು ಸೌಲನ ಕಾಲದಲ್ಲಿ ಅಲಕ್ಷ್ಯಮಾಡಿದ ನಮ್ಮ ದೇವ ಮಂಜೂಷವನ್ನು ತೆಗೆದುಕೊಂಡು ಬರೋಣ ಅನ್ನಲು ಅವರೆಲ್ಲರೂ ಆ ಮಾತಿಗೆ ಮೆಚ್ಚಿ ಅದರಂತೆ ಮಾಡಬೇಕೆಂದು ಹೇಳಿದರು (1 ಪೂರ್ವಕಾಲವೃತ್ತಾಂತ 13:1-4).

ಎರಡು ಪದ "ನಿಮ್ಮ ಸಮ್ಮತಿಯು *ಇರುವುದಾದರೆ*" ಎಂದು "ಸಲಹೆ" ಎಂಬ ಎರಡು ಪದಗಳನ್ನು ಗಮನಿಸು; ಆಗ ಅವರ ಪ್ರತಿಕ್ರಿಯೆ: "ಇದು ಎಲ್ಲರ ದೃಷ್ಟಿಗೆ ಸರಿಯಾಗಿರುವದರಿಂದ ಇದನ್ನು ಮಾಡೋಣ ಎಂದು ಸರ್ವ ಇಸ್ರಾಯೇಲ್ ಸಮೂಹದವರು ಉತ್ತರಿಸಿದರು." ಅರಸನಾದ ದಾವೀದನು, ತಾನು ಇಚ್ಚಿಸಿದನ್ನು ನೆರವೇರಿಸಲು ಅವನಿಗೆ ಸಾಧ್ಯವಿದ್ದರು ಯೆರೂಸಲೇಮಿಗೆ ಮಂಜೂಷವನ್ನು ತರುವ ವಿಚಾರವನ್ನು ತನ್ನ ಇಷ್ಟವನ್ನು ಜನರ ಮೇಲೆ ಹೊರಿಸಿದನು. ಈ ಕಾರ್ಯ ದಾವೀದನಿಗೆ ಬಹು ಪ್ರಮುಖವಾಗಿದ್ದರಿಂದ ಜನರ ಸಲಹೆಯನ್ನು ಪಡೆದನು. "ಅರಸನ ಯೋಜನೆಯನ್ನು" ಇಸ್ರಾಯೇಲ್ಯರ ಯೋಜನೆಯನ್ನಾಗಿ ಪರಿವರ್ತಿಸಿದನು. ವಿವೇಕಿಗಳಾದ ನಾಯಕರುಗಳು ಆಲಿಸಿ ಮತ್ತು ಕಲಿಯಿರಿ.

## ವಿವೇಕಿಗಳಾದ ನಾಯಕರುಗಳಿಗೆ ಆತ್ಮೀಕ ವಿಷಯಗಳೇ ಪ್ರಥಮ ಆಧ್ಯತೆ

1 ಪೂರ್ವಕಾಲವೃತ್ತಾಂತ 13:1-4, ದೇವರ ಮಂಜೂಷವನ್ನು ಯೆರೂಸಲೇಮಿಗೆ ತರುವಂಥ ಕಾರ್ಯ ದಾವೀದನ ಪ್ರಮುಖ ಕಾರ್ಯವಾಗಿತ್ತು. ಇದುವರೆವಿಗೂ ದಾವೀದನು ಮಾಡಿದ ಕಾರ್ಯಗಳು ಅಂತ್ಯವನ್ನು ಕಂಡಿದ್ದವು; ಇಸ್ರಾಯೇಲ್ ಜನರನ್ನು ದೇವರ ನಿಕಟ ಸಂಬಂಧಕ್ಕೆ ನಡಿಸುವಂಥದ್ದೇ ಇದರ ಮೂಲ ಉದ್ದೇಶವಾಗಿತ್ತು. ಪೂರ್ವಕಾಲವೃತ್ತಾಂತದ ಬರಹಗಾರನ ಪ್ರಕಾರ ದಾವೀದನು ಯೆರೂಸಲೇಮನ್ನು ತನ್ನ *ಮುಖ್ಯ* ಕೇಂದ್ರವನ್ನಾಗಿ ಮಾಡಿಕೊಂಡ[61] ತಕ್ಷಣ ದೇವರ ಮಂಜೂಷವನ್ನು ಯೆರೂಸಲೇಮಿಗೆ ತರುವಂಥ ಯೋಜನೆಯನ್ನು ಮಾಡಿದನು. ವಿವೇಕಿಗಳಾದ ನಾಯಕರುಗಳಿಗೆ ಆತ್ಮೀಕ ವಿಷಯಗಳೇ ಪ್ರಥಮ ಆಧ್ಯತೆ.

## ಮುಕ್ತಾಯ

ದಾವೀದನು ಯೂದಾ ಕುಲದವಲಿಂದ ಅಭಿಷೇಕ ಹೊಂದಿ ಅರಸನಾದ ಮೇಲೆ, ಅವನ ಅದ್ಭುತವಾದ ಜೀವನದ ಪ್ರಾರಂಭ ನಿಮ್ಮನ್ನು ಪ್ರೇರೇಪಿಸಿತು ಎಂದು ನಾನು ಭರವಸೆಯಿಟ್ಟಿದ್ದೇನೆ. ನಾನು ಈ ವಿಷಯಗಳನ್ನು ಪುನ ಪುನ ಧ್ಯಾನಿಸುತ್ತಿರುವಾಗ ನನ್ನ ಹೃದಯದಲ್ಲಿ ಉಂಟಾದ ಪ್ರಾರ್ಥನೆ ಏನೇಂದರೆ "ನೀನು ನನ್ನನ್ನು ನಾಯಕತ್ವಕ್ಕೆ ನಡೆಸುವಾಗ ದೇವರೆ ದಾವೀದನ ಆಡಳಿತದ ಮೊದಲ ದಿವಸಗಳಲ್ಲಿ ಅವನಿಗೆ ನೀನು ನೀಡಿದ ವಿವೇಕವನ್ನು ನನಗೂ ದಯಪಾಲಿಸು."

ನಮ್ಮಲ್ಲಿ ಅನೇಕರು ಹಿಂಬಾಲಿಸುವಂಥ ಸ್ಥಾನದಲ್ಲಿರುವದಲಿಂದ, ನಾನು ಒತ್ತಾಯಪೂರ್ವಕವಾಗಿ ಹೇಳುವದೇನೆಂದರೆ, ಉತ್ತಮವಾದ[62] ಅನ್ಯೋನ್ಯತೆಯು, ಒಳ್ಳೆಯ ನಾಯಕತ್ವದಷ್ಟೆ ಪ್ರಾಮುಖ್ಯವಾಗಿದೆ. ದೇವರನ್ನು ಮಹಿಮೆ ಪಡಿಸುವಂಥ ನಾಯಕರುಗಳನ್ನು ದಯಪಾಲಿಸು ಎಂಬ ಪ್ರಾರ್ಥನೆಯು ನಮ್ಮದಾಗಿರಲಿ. ಈಗಾಗಲೇ ನಾವು ಹೊಂದಿರುವಂಥ ನಾಯಕರುಗಳಿಗಾಗಿ ಪ್ರಾರ್ಥಿಸೋಣ.[63] ನಮ್ಮ ನಾಯಕರುಗಳಲ್ಲಿ ಉತ್ತಮವಾದುದ್ದನ್ನು ನಿರೀಕ್ಷಿಸುವಂಥ ದೃಢ ಸಂಕಲ್ಪವು ನಮ್ಮಲ್ಲಿರಲಿ.[64]

"ದೇವರು ನಮಗೆ ವಿವೇಕವುಳ್ಳ ನಾಯಕರುಗಳನ್ನು ದಯಪಾಲಿಸಲಿ - ಮತ್ತು ನಮ್ಮನ್ನು ನಂಬಿಗಸ್ತರಾದ ಹಿಂಬಾಲಕರನ್ನಾಗಿ ಮಾಡಿಲಿ!"

---

ಟಿಪ್ಪಣಿಗಳು

[1]W. Phillip Keller, *David, The Shepherd King* (Waco, Tex.: Word, 1986), 15. [2]ಎರಡನೇಯ ಸಾರಿ ದಾವೀದನು ಅಭಿಷೇಕ ಹೊಂದಿದನು. [3]ಬೆನ್ಯಾಮೀನ್ಯರ ಸಂಖ್ಯೆ ಆರುನೂರಕ್ಕೆ ಇಳಿದಾಗ, ಅದರಲ್ಲಿ ನಾನೂರು ಜನರು, ಯಾಬೇಷ್ ಗಿಲ್ಯಾದಿನ ಕನ್ಯೆಯರನ್ನು ಹೆಂಡತಿಯರನ್ನಾಗಿ ಮಾಡಿಕೊಂಡರು (ನ್ಯಾಯಸ್ಥಾಪಕರು 21:8-14). ಸೌಲನ ಆಡಳಿತ ಕಾಲದಲ್ಲಿ ಅಮ್ಮೋನಿಯರು ಯಾಬೇಷ್ - ಗಿಲ್ಯಾದಿನವರ ಬಲಗಣ್ಣುಗಳನ್ನು ಕಿತ್ತು ಅವರನ್ನು ಗುಲಾಮರನ್ನಾಗಿ ಮಾಡಲು ಹೊರಟಾಗ ಸೌಲನು ಅವರನ್ನು ಬಿಡುಗಡೆ ಮಾಡಿದನು (1 ಸಮುವೇಲ 11:1-11). [4]ಅವರನ್ನು ಸಮಾಧಿ ಮಾಡುವದಕ್ಕಿಂತ ಮೊದಲು, ಅವರ ದೇಹಗಳನ್ನು ಸುಟ್ಟರು (1 ಸಮುವೇಲ 31:12). ದೇಹಗಳನ್ನು ಸಂಪೂರ್ಣವಾಗಿ ಸಮಾಧಿ ಮಾಡಿರಲಿಲ್ಲ, ನಂತರ ದಾವೀದನು ಅವರ ಮೂಳೆಗಳನ್ನು ತೆಗೆದುಕೊಂಡು ಹೋದನು (2 ಸಮುವೇಲ 21:12-14). ಸ್ವಚ್ಛತೆಯ ಕಾರಣದಿಂದ ಈ ಕಾರ್ಯವನ್ನು ಮಾಡಿದ್ದರು. ಅಥವಾ ಅದು ಸ್ಥಳೀಯ ಪದ್ಧತಿ ಯಾಗಿರಬಹುದು; ಆದರೆ ಅದು ಯೆಹೂದ್ಯರ ಪದ್ಧತಿಯಾಗಿರಲಿಲ್ಲ. [5]ಮೆಫೀಬೋಷ್ತನಿಗೆ ಆರೈಕೆಯನ್ನು ಮಾಡುವದರ ಮೂಲಕ ದಾವೀದನು ಯೋನಾತಾನನಿಗೆ ಮಾಡಿದ ವಾಗ್ದಾನವನ್ನು ನೆರವೇಲಿಸಿದ್ದನು. [6]1 ಯೋಹಾನ 4:20. [7]ಗಮನಿಸಿ ಕೀರ್ತನೆ 133:1. ಐಕ್ಯತೆಯು ಅತಿ ಪ್ರಾಮುಖ್ಯವಲ್ಲ, ಆದರ ಪ್ರಾಮುಖ್ಯವಾದದ್ದು, ಪಲಿಶುದ್ಧತೆ ಮತ್ತು ನಂಬಿಗಸ್ತಿಕೆ, ಐಕ್ಯತೆಗಿಂತಲು ಪ್ರಮುಖವಾದದ್ದು (ಯಾಕೋಬ 3:17ಎ; ಮತ್ತಾಯ 10:34), ಈ ಗುಲಿಗಳ ಹಿಂದೆ ಐಕ್ಯತೆಯು ಸಮೀಪವಾಗಿದೆ. [8]1 ಸಮುವೇಲ 17:55; 26:5. [9]ಗಮನಿಸಿ 2 ಸಮುವೇಲ 3:17. [10]ದಾವೀದನು ತನ್ನ ಸೈನ್ಯಾಧಿಕಾಲಿಯಾಗಿದ ಯೋವಾಬನಿಗಿಂತಲೂ, ಅಬ್ನೇರನನ್ನು ಹೆಚ್ಚು ಮೆಚ್ಚಿಕೊಂಡಿದ್ದನು (1 ಅರಸುಗಳು 2:32).

[11]ಗಮನಿಸಿ 2 ಸಮುವೇಲ 3:9, 10, 18. ಸೌಲನನ್ನು ದಾವೀದನು ಎರಡು ಸಾರಿ ಕೊಲ್ಲದೆ ಬಿಟ್ಟುಬಿಟ್ಟಾಗಲೂ ಅಬ್ನೇರನು ಅಲ್ಲಿದ್ದನು. ದಾವೀದನೇ ಮುಂದಿನ ಅರಸನು ಎಂದು ಸೌಲನು ಒಪ್ಪಿಕೊಂಡಿದ್ದನು (1 ಸಮುವೇಲ 24; 26). [12]ಅಬ್ನೇರನು ಸೌಲನ ಸಂಬಂಧಿ ಅಥವಾ ಚಿಕ್ಕಪ್ಪನಾಗಿರಬಹುದು (1 ಸಮುವೇಲ 14:50, 51). [13]ಎರಡನೇ ಸಮುವೇಲ 2:13ರಲ್ಲಿ ಯೋವಾಬನು ದಾವೀದನ ಸೈನ್ಯದ ನಾಯಕನು ಎಂದು ಪ್ರಥಮ ಸಾರಿ ನಮೂದಿಸಲಾಗಿದೆ. [14]ಸೌಲನನ್ನು ಕೊಲ್ಲುವದಕೋಸ್ಕರವಾಗಿ ಅಬೀಷೈಯು ದಾವೀದನನ್ನು ಸೌಲನು ಬಿಡಾರದ ಬಳಿ ಕರಕೊಂಡು ಹೋದನು. [15]ಅವರು ದಾವೀದನ ಸಹೋದಲಿಯಾದ ಚೆರೂಮಳ ಮಕ್ಕಳು. [16]ಅಬ್ನೇರನು 360 ಜನರನ್ನು ಕಳಕೊಂಡರೆ, ಯೋವಾಬನು ಕೇವಲ 20 ಜನರನ್ನು ಕಳಕೊಂಡನು (2 ಸಮುವೇಲ 2:31). [17]NEBಯಲ್ಲಿ ಗಮನಿಸಿ: "ಅಬ್ನೇರನು ಬರ್ಜಿಯನ್ನು *ಹಿಂದಗಡೆಯಿಂದ* ಅವನ

ಬೆನ್ನಿಗೆ ತಿವಿದನು" (2 ಸಮುವೇಲ 2:23; ಒತ್ತಿ ಹೇಳಿದ್ದು ನನ್ನದು). ಅಬ್ನೇರನು ಬರ್ಜಿಯ ಹಿಡಿಯನ್ನು ಭೂಮಿಗೆ ಚಚ್ಚಿದಾಗ, ಅಸಾಯೇಲನು, ಅವಸರವಾಗಿ ಅದರ ಮೇಲೆ ಬಿದ್ದು ಜಡಿಯಲ್ಪಟ್ಟನು. [18]2 ಸಮುವೇಲ ಇದರಲ್ಲಿ ಇರುವ ಕೆಲವು ಸಂಗತಿಗಳನ್ನು ಕಾಲಾನುಕ್ರಮವಾಗಿ ನಮೂದಿಸಿದೆ. ಪ್ರಾಸಂಗಿಕವಾಗಿ ನಮೂದಿಸಲಾಗಿದೆ ಆದದ್ದರಿಂದ ಯಾವ ಘಟನೆಗಳು ಎಲ್ಲಿ ನಡೆದವು ಎಂದು ಕ್ರಮವಾಗಿ ತೋರಿಸಲು ಅಸಾಧ್ಯವಾಗುತ್ತದೆ. ದಾವೀದನು ಅರಸನಾಗುವದಕ್ಕಿಂತ ಮೊದಲು ಈಷ್ಬೋಶೆತನು ಎರಡು ವರ್ಷಗಳ ಕಾಲ ಆಡಳಿತ ನಡೆಸಿ ಮೃತಿ ಹೊಂದಿದನು. ದಾವೀದನು ಯೂದಾಯದಲ್ಲಿ ಆಡಳಿತ ನಡೆಸುವಾಗ - ಈಷ್ಬೋಶೆತನು ಇಸ್ರಾಯೇಲಿನಲ್ಲಿ ನಡೆಸಿದ ಎರಡು ವರ್ಷದ ಆಡಳಿತ ಇರಬಹುದು. [19]ಯೊರ್ದಾನಿಗೆ ಅಡ್ಡಲಾಗಿ ಗಿಲ್ಯಾದಿನ ಪಟ್ಟಣವಿತ್ತು ಹೆಬ್ರೋನಿನಿಂದ ಸುಮಾರು ಐವತ್ತು ಮೈಲುಗಳು. [20]ಈಷ್ಬೋಶೆತ್ ಇದರ ನಿಜವಾದ ಅರ್ಥ "ನಾಚಿಕೆಯ ಮಗನು" ಇದು ಅವನನ್ನು ನಾಚಿಕೆ ಪಡಿಸಲು ಕೊಟ್ಟ ಅಡ್ಡ ಹೆಸರು. ಅಥವಾ ಸದ್ದು ಕಾಯರು ಅನ್ಯ ದೇವತೆಯಾದ ಬಾಳನನ್ನು ದ್ವೇಷಿಸಿದ್ದರಿಂದ ಈ ಹೆಸರನ್ನು ನೀಡಿದ್ದರು. ಅಂತಿಮವಾಗಿ "ಬಾಳನು" ಅನ್ನುವಂಥ ಹೆಸರು "ನಾಚಿಕೆ" ಎಂಬುದಾಗಿ ಬದಲಾಯಿತು.

[21]1 ಪೂರ್ವಕಾಲ ವೃತ್ತಾಂತ 8:33. "ಎಷ್ಬಾಲ" ಅಂದರೆ "ಬಾಳನ ಮನುಷ್ಯನು" ಅದರ ಇನ್ನೊಂದು ಅರ್ಥ "ಕರ್ತನ ಮನುಷ್ಯನು" "ಕರ್ತನು" ಅಂದರೆ ಬಹುಶ "ಯೆಹೋವನು" ಎಂಬುದಾಗಿದೆ. [22]ಈಷ್ಬೋಶೆತ್ (1 ಪೂರ್ವಕಾಲವೃತ್ತಾಂತ 8:33) ಕಡೆಯಲ್ಲಿ ನಮೂದಿಸಲಾಗಿದೆ. 2 ಸಮುವೇಲ 21:8ರಲ್ಲಿ ಸೌಲನಿಗೆ ಹುಟ್ಟಿದ ಇತರೆ ಗಂಡು ಮಕ್ಕಳ ಬಗ್ಗೆ ನಮೂದಿಸಲಾಗಿದೆ ಅವರು ಇನ್ನೂ ಚಿಕ್ಕವರಿದ್ದರೆಂದು ನಾನು ನೆನಸುತ್ತೇನೆ. [23]ಹೋಲಿಸು 2 ಸಮುವೇಲ 3:11; 4:1. [24]ಅಬ್ನೇರನಿಗೆ ಪಾಪ ಪ್ರಜ್ಞೆ ಇತ್ತು ಎಂದು ಇಬ್ರಿಯ ಲೇಖನಗಳು ಹೇಳುವದಿಲ್ಲ. ಕೆಲವರು ಸೆಪ್ಟ್ಯುಜೆಂಟ್‌ನ್ ಭಾಷಾಂತರವನ್ನು ಅನುಕರಿಸುವದರಿಂದ ಮತ್ತು "ಅಬ್ನೇರನು ಆಕೆಯನ್ನು ತೆಗೆದುಕೊಂಡನು" ಎಂದು 7ನೇ ವಚನದ ಕಡೆಯ ಭಾಗ ತಿಳಿಸುತ್ತದೆ. [25]2 ಸಮುವೇಲ 3:12. [26]ಜ್ಞಾನೋಕ್ತಿ 16:7. [27]ದಾವೀದನಿಗೆ ಒಂದು ನಿಯಮವಿತ್ತು - ಅದು ವಿಚಿತ್ರವಾದದ್ದು - ಅದು ಅವನ ಹೆಂಡತಿಯಾದ ಮೀಕಳು ತಿರುಗಿ ಅವನಲ್ಲಿಗೆ ಬರಬೇಕಾಯಿತು. ಹೆಚ್ಚಿನ ಪ್ರಬಂಧದಲ್ಲಿ "ದಾವೀದನ ಬೇಡಿಕೆ ಮತ್ತು ಮೀಕಲಳು" ಇದನ್ನು ಗಮನಿಸಿ. [28]ಬಹುಶ ಇಂಥ ಒಂದು ಸಂದರ್ಭದಲ್ಲಿಯೇ ದಾವೀದನ ಮಗನಾದ ಸೊಲೊಮೋನನು ಜ್ಞಾನೋಕ್ತಿ 25:21ನ್ನು ಬರೆದನು. [29]2 ಸಮುವೇಲ 18:5, 14; 1 ಅರಸುಗಳು 2:5, 6. [30]ಒಂದು ಅಪವಾದಾತ್ಮಕ ಗಮನ 2 ಸಮುವೇಲ 10:12.

[31]ಅಬಿಷೈಯನು ಸಹ ಅಬ್ನೇರನ ಮರಣದಲ್ಲಿ ಪಾಲುಗಾರನಾಗಿದ್ದನು. [32]ಯೋವಾಬನು ಅನೇಕ ಕಾರಣಗಳಿಂದ ಅಬ್ನೇರನನ್ನು ಕೊಂದಿದ್ದರೂ ಮುಯ್ಯಿ ತೀರಿಸಿ ಕೊಳ್ಳುವುದೇ ಮುಖ್ಯ ಉದ್ದೇಶವಾಗಿತ್ತು 2 ಸಮುವೇಲ 30:27, 30. [33]ದಾವೀದನು ಯೆರೂಸಲೇಮನ್ನು ವಶಪಡಿಸಿಕೊಳ್ಳಲು ಹೋದ ಸಮಯದಲ್ಲಿ, ಸೈನ್ಯಾಧಿಕಾರಿಯ ಹುದ್ದೆಯಲ್ಲಿ ಯಾರು ಇರಲಿಲ್ಲ (ಖಾಲಿಯಾಗಿತ್ತು) (1 ಪೂರ್ವಕಾಲವೃತ್ತಾಂತ 11:6). [34]ಅಬ್ನೇರನನ್ನು ಕೊಂದು ಹಾಕಿದ ಒಂದು ಕಾರಣದಿಂದ ಯೋವಾಬನು ಗಲ್ಲಿಗೇರಿ ಸಲ್ಪಟ್ಟನು (1 ಅರಸುಗಳು 2:28-34). [35]ಗೋಣಿ ತಟ್ಟನ್ನು ಧರಿಸಿಕೊಳ್ಳುವದು ಪಶ್ಚಾತ್ತಾಪ ಅಥವಾ ದುಖದ ಸೂಚನೆಯಾಗಿತ್ತು. ಅಮೇರಿಕ ದಲ್ಲಿ ಇದನ್ನು ಬುರ್‌ಲ್ಯಾಪ್ ಅಂದರೆ ಸುತ್ತುವುದಕ್ಕೆ ಬೇಕಾದ ಗೋಣಿ ಬಟ್ಟೆ ಎಂದು ಕರೆಯುತ್ತಾರೆ. [36]ಜ್ಞಾನೋಕ್ತಿ ಇತ್ಯಾದಿ 1:1, 2; 2:2ನ್ನು ನೋಡಿರಿ. [37]ಅವರ ಕ್ರಿಯೆಗಳು ಸಹ, ಮುಯ್ಯಿ ತೀರಿಸುವ ಪ್ರತಿಕ್ರಿಯೆ ಆಗಿರಬಹುದು ಒಂದು ಹಂತದಲ್ಲಿ ಸೌಲನು ಗಿಬ್ಯೋನ್ಯರನು ನಿರ್ನಾಮ ಮಾಡಬೇಕೆಂದಿದ್ದನು (2 ಸಮುವೇಲ 21:2). ಬೇರೂಯದ ಇಬ್ಬರು ಸಹೋದರರನ್ನು ಬೆನ್ಯಾಮೀನ್ಯರ ವಶಕ್ಕೆ ನೇಮಿಸಲಾಗಿತ್ತು (ಯೆಹೋಶುವ 9:17; 18:25). [38]ಸೆಪ್ಟಜೂಯಂಟ್‌ನಿಂದ ಅನುವಾದಗೊಂಡಿರುವ RSVಬೈಬಲ್ ತಿಳಿಸುತ್ತದೆ. 2 ಸಮುವೇಲ 4:6ರಲ್ಲಿ ಆಗ ಬಾಗಲು ಕಾಯುವವಳು ಗೋದಿಕೇರುತ್ತಿದ್ದ ಹಾಗೆಯೇ ತೂಗಡಿಸಿ ನಿದ್ರೆ ಮಾಡುತ್ತಿರುವನ್ನು ಅವರು ಕಂಡು ರೇಕಾಬ್ ಮತ್ತು ಇಬ್ಬರು ಸಹೋದರರು ಒಳ ನುಗ್ಗಿದರು. [39]ಈಷ್ಬೋಶೆತನು ದೈಹಿಕವಾಗಿ ಬಲಹೀನನಾಗಿದ್ದರು. ಅವನು ಒಳ್ಳೆಯ ಮನುಷ್ಯನು, ಎಂದು ದಾವೀದನು ತಿಳಿದಿದ್ದನು. [40]ರೋಮಾಪುರ 8:31.

[41]ಇದು ದಾವೀದನ ಮೂರನೇಯ ಅಭಿಷೇಕ. [42]340,000 ಸಾವಿರ ಜನರು ಹೆಬ್ರೋನಿಗೆ ಬಂದಿದ್ದರು ಅವರು ಬಾರಲೇ ಇಲ್ಲ ಎಂದು ನಂಬುವದಕ್ಕೆ ಕಾರಣವಿಲ್ಲ. ಹೇಗೂ ಸಂದಾನಕಾರರ ಗುಂಪು ಬಂದಿತ್ತು. ಮತ್ತು ಜನ ಸಂದಣಿಯಿತ್ತು. [43]ಆದಿಕಾಂಡ 14:18ff. "ಸಾಲೇಮ್" ಅನ್ನುವುದು "ಯೆರೂಸಲೇಮಿನ" ಚಿಕ್ಕ ಹೆಸರು (ಗಮನಿಸು ಕೀರ್ತನೆ 76:2). [44]ಹೋಲಿಸು ಯೆಹೋಶುವ 10:22-27. [45]ಯೆಹೋಶುವ 15:63. [46]ನ್ಯಾಯಸ್ಥಾಪಕರು 1:21. [47]ಯೆರೂಸಲೇಮ "ಯೆಬೂಸೆ" ಎಂದು ಕೆಲವು ಸಾರಿ ಕರೆಯಲ್ಪಟ್ಟಿದೆ (ನ್ಯಾಯಸ್ಥಾಪಕರು 19:10; 1 ಪೂರ್ವಕಾಲವೃತ್ತಾಂತ 11:4).

[48]2 ಸಮುವೇಲ 5:6ನ್ನು ನೋಡಿರಿ. [49]ದಾವೀದನು ಯೆರೂಸಲೇಮನ್ನು ವಶಪಡಿಸಿಕೊಂಡಾಗ ಅದರ ವಿಸ್ತೀರ್ಣ ಕೇವಲ ಎಂಟು ಅಥವಾ ಹತ್ತು ಎಕರೆಗಳಿಗೆ ಸೀಮಿತವಾಗಿತ್ತು (2 ಸಮುವೇಲ 5:9) ರಲ್ಲಿರುವ "ಮಿಲ್ಲೊ" ಪದವನ್ನು ಗಮನಿಸಿ; ಇಬ್ರಿಯದಿಂದ ಬಂದ ಕ್ರಿಯಾಪದದ ಅರ್ಥ "ತುಂಬಿಸುವದಕೆ" ವಿಸ್ತರಣೆಗಾಗಿ ಕಲ್ಲಿನಿಂದ ತುಂಬಿ ಸಿದ್ಧ ಮಾಡಲ್ಪಟ್ಟ ಸ್ಥಳ "ಅನಿಸಿಕೆಯ ಮಾಳಿಗೆ" ಎಂದು NIV ಬೈಬಲ್‌ನ ಅನುವಾದ. [50]ಇಬ್ರಿಯ 13:17.

[51]ನಮಗೆ ತಿಳಿದಂತೆ, ದಾವೀದನ ಕುರಿತಾಗಿ, ಈ ನಿಕರವಾದ ವಾಕ್ಯಗಳು ಕೇಳಲ್ಪಡಲಿಲ್ಲ (1 ಸಮುವೇಲ 9:16). ಹೇಗೂ ಸೌಲನು ದೇವರ ಚಿತ್ತವನ್ನು ನೆರವೇರಿಸದೆ ಇದ್ದದರಿಂದ ಸೌಲನಿಗೆ ಬದಲಾಗಿ ದೇವರಿಂದ ನೇಮಿಸಲ್ಪಟ್ಟವನ ಕುರಿತಾಗಿ ಹೇಳಲ್ಪಟ್ಟಿದೆ. [52]1 ಪೂರ್ವಕಾಲವೃತ್ತಾಂತ 14:9ರಲ್ಲಿ ಫಿಲಿಷ್ಟಿಯರು ತಗ್ಗಿನಲ್ಲಿ *ಹೋರಾಡಿದರು* ಎಂದು ಹೇಳುತ್ತದೆ. [53]ಅಪೊಸ್ತಲರ ಕೃತ್ಯಗಳು 20:28-30ನ್ನು ಗಮನಿಸಿ. [54]ಯೋಷೆಬಷ್ ಚಿತನು ಇತರ ಅರಸನ ಸಹಾಯವನ್ನು ಕೋರಿದನು ಮತ್ತು ಅವರ ಸೈನ್ಯವು ಮೊದಲಿಗಿಂತಲೂ ಮೂರು ಪಟ್ಟು ಹೆಚ್ಚಾಗಿತ್ತು. [55]ಜೋಸೀಫಸ್‌ನು, ಮರಗಳಲ್ಲಿ ಎಲೆಗಳ ಶಬ್ದವುಂಟಾದರು ಅಲ್ಲಿ ಗಾಳಿ ಇರಲಿಲ್ಲ ಎಂದು ಹೇಳಿದನು. [56]2 ಸಮುವೇಲ 23:8; 1 ಪೂರ್ವಕಾಲವೃತ್ತಾಂತ 11:10. [57]ದಾವೀದನು ಹೆಬ್ರೋನಿನಲ್ಲಿ ಇನ್ನೂ ನಾಲ್ಕು ಜನ ಹೆಂಡತಿಯರನ್ನು ಮದುವೆಯಾದನು ಎಂದು ಪರೋಕ್ಷವಾಗಿ ನಮಗೆ ತಿಳಿದಿರುತ್ತದೆ. [58]"ದಾವೀದನು ಯೆರೂಸಲೇಮಿನಲ್ಲಿ ಇನ್ನೂ ಹೆಚ್ಚಾದ ಪತ್ನಿಯರನ್ನು ಉಪಪತ್ನಿಯರನ್ನು ತೆಗೆದುಕೊಂಡನು ಎಂದು ತಿಳಿದಿದ್ದೇವೆ." ಧರ್ಮೋಪದೇಶಕಾಂಡದಲ್ಲಿ 17:17ರಲ್ಲಿ ನಾವು ನೋಡುವ ವಿಷಯಕ್ಕೆ ತದ್ವಿರುದ್ಧವಾಗಿ ದಾವೀದನು ಬಹು ಪತ್ನಿತ್ವವನ್ನು ಹೊಂದಿದ್ದನು, ಆದರೆ ಕಥೆಯು ಬೆಳೆಯುತ್ತಾ ಬಂದಂತೆ ನಾಶಕರವಾದ ಪರಿಣಾಮವೇ ಇದರ ವಿಷಯವನ್ನು ಮಾತನಾಡುತ್ತದೆ. [59]1 ಅರಸು 1:6ನ್ನು ಗಮನಿಸಿ. [60]ದಾವೀದ ಮತ್ತು ಮೀಕಯೇಲರ ಕಥೆಯನ್ನು ಇಲ್ಲಿ ತಿಳಿಯಬಹುದು. ಯಾಕೆಂದರೆ ಅಲಕ್ಷಕ್ಕೆ ಒಳಗಾದ ಸಂಬಂಧವು ಪ್ರೀತಿಯನ್ನು ನಾಶಮಾಡುತ್ತದೆ. ಹೆಚ್ಚಿನ ಮಾಹಿತಿಗಾಗಿ "ದಾವೀದನ ಬೇಡಿಕೆ ಮತ್ತು ಮೀಕಳು" ಇದನ್ನು ನೋಡಿ.

[61]1 ಪೂರ್ವಕಾಲವೃತ್ತಾಂತ 13:1 ಈ ವಾಕ್ಯವು 1 ಪೂರ್ವಕಾಲವೃತ್ತಾಂತ 11:1-9ನ್ನು ಕಾರ್ಯರೂಪದಲ್ಲಿ ಹಿಂಬಾಲಿಸುತ್ತದೆ. ಇದರಲ್ಲಿರುವ ವಚನವು "ದಾವೀದ ಮತ್ತು ಅವನ ಯುದ್ಧ ಶೂರರ" ಬಗ್ಗೆ ತಿಳಿಸುತ್ತದೆ. 1 ಪೂರ್ವಕಾಲವೃತ್ತಾಂತ, ಹೀರಾಮನು ದಾವೀದ ನನ್ನು ಗುರುತಿಸಿದ ವಿಷಯವನ್ನು ತಿಳಿಸುತ್ತದೆ. ಮತ್ತು ದೇವರ ಮಂಜೂಷವನ್ನು ಮೊದಲ ಸಾರಿ ತರುವ ವಿಷಯದಲ್ಲಿ ದಾವೀದನಿಗೂ, ಫಿಲಿಷ್ಟಿಯರಿಗೂ ಮಧ್ಯದಲ್ಲಿ ನಡೆದ ಹೋರಾಟ ಮತ್ತು ಇತರೆ ಘಟನೆಗಳ ಬಗ್ಗೆ ತಿಳಿಸುತ್ತದೆ (1 ಪೂರ್ವಕಾಲವೃತ್ತಾಂತ 13) ದೇವರ ಮಂಜೂಷವನ್ನು ಯೆರೂಸಲೇಮಿಗೆ ತರುವ ಕಾರ್ಯದಲ್ಲಿ ದಾವೀದನು ಸಫಲನಾದನು (1 ಪೂರ್ವಕಾಲವೃತ್ತಾಂತ 15). ಅದು ಸರಿಯಾದ ಅನುಕ್ರಮ ಎಂದು ನಾನು ನಂಬುತ್ತೇನೆ. [62]"ಹಿಂಬಾಲಿಸುವವನ - ಹಡಗು" ಇದು ಪರಿಪೂರ್ಣವಾದದ್ದು ಆದರೆ "ಹಡಗನ್ನು - ಹಿಂಬಾಲಿಸು" ಅನ್ನುವಂಥ ಶಬ್ದವನ್ನು ನಾನು ಇಷ್ಟಪಡುತ್ತೇನೆ. [63]ಅವರು ಸರ್ಕಾರದಲ್ಲಿರಲಿ, ಸಭೆಯಲ್ಲಿರಲಿ (1 ತಿಮೊಥಿ 2:1, 2), ಸಭೆಯಲ್ಲಿ (ಇಬ್ರಿಯರಿಗೆ 13:17, 18) ಅಥವಾ ಮನೆಯಲ್ಲಿರಲಿ, ಅವರಿಗಾಗಿ ನಾವು ಪ್ರಾರ್ಥಿಸಬೇಕು. [64]ಸರ್ಕಾರದಲ್ಲಿದ್ದರೂ (ರೋಮಾವರ 13:1ಬಿ ff.) (ಇಬ್ರಿಯ 13:17) ಅಥವಾ ಸಭೆಯಲ್ಲಿದ್ದರೂ ಅಥವಾ (ಹೋಲಿಸು ಎಫೆಸದವರಿಗೆ 5:22; 6:1-3) ಮನೆಯಲ್ಲಿದ್ದರೂ, ನಾವು ಅವರಿಗೆ - ವಿಧೇಯರು ಮತ್ತು ಸಹಾಯಕರೂ ಆಗಿರಬೇಕು.